ಒಬ್ಬ ಮಾರಾಟವಾದ ಪತ್ರಕರ್ತ ಸಾವಿರ ಭಯೋತ್ಪಾದಕರ ಸಮಾನ
-ಡಾ|| ಬಿ.ಆರ್. ಅಂಬೇಡ್ಕರ್

PRGI No: KARKAN/2023/88369

# ಮುಸ್ಸಂಜೆ ಸಮಯ

MUSSANJE SAMAYA

ಕನ್ನಡ ಸಂಜೆ ದಿನಪತ್ರಿಕೆ
Evening Daily paper

EDITOR : R. RAGHAVENDRACHARI musanjesamaya21@gmail.com



ಪತ್ರಕರ್ತರ ಸಂಘಟನೆಯಾದ
ಪ್ರೆಸ್ ಕ್ಲಬ್ ಕೌನ್ಸಿಲ್(ರಿ.)
ಸಂಸ್ಥೆಗೆ ರಾಜ್ಯಾದ್ಯಂತ ಜಿಲ್ಲಾಧ್ಯಕ್ಷರ ನೇಮಕಾತಿಗೆ ಅರ್ಜಿ ಆಹ್ವಾನ
ಸಂಪರ್ಕಿಸಿ
9972937309
8553949970



ಸಂಪುಟ: 4 । ಸಂಚಿಕೆ: 188 ಸೆಪ್ಟೆಂಬರ್ 23 ಬುಧವಾರ 2026 ಬೆಂಗಳೂರು ಪುಟಗಳು – 04 | Issue: 188 | September 23, Wednesday 2026 | page - 04 | Rs. 3.00/-

ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ಕೊಡಗು, ತುಮಕೂರು, ಶಿವಮೊಗ್ಗ, ಬೆಂ.ಗ್ರಾಮಾಂತರ, ಬೆಂಗಳೂರು


### ಮುಸ್ಸಂಜೆ ಮಾತು

ಬದುಕಿನಲ್ಲಿ ಯಾರು ಎಷ್ಟೇ ಹುಳಿ ಹಿಂಡಿದರೂ,ಒಡೆದ ಹಾಲಿನಿಂದ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ, ಮಾಡಿಕೊಳ್ಳುವ ಜಾಣತನ ನಮಗಿರಬೇಕಷ್ಟೆ
–ಚಂದ್ರಶೇಖರ್ ಗುರೂಜಿ

### ಸಾರ್ವಜನಿಕರ ಗಮನಕ್ಕೆ: ಅಪಹರಣವಾದರೆ ಈ ಕೆಲಸ ಮಾಡಿ




### ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ಚಂಡಮಾರುತ ಸೃಷ್ಟಿ : ಹವಾಮಾನ ಇಲಾಖೆ ಮಾಹಿತಿ



ಮುಸ್ಸಂಜೆ ಸಮಯ, ಹೊಸದಿಲ್ಲಿ: ಬಂಗಾಳಕೊಲ್ಲಿಯಲ್ಲಿ ಚಂಡಮಾರುತವೊಂದು ಸೃಷ್ಟಿಯಾಗಿದೆ. ಅದು ತೀವ್ರಗೊಳ್ಳುತ್ತಾ ಮುಂದುವರಿಯುತ್ತಿದ್ದು, ಶೀಘ್ರದಲ್ಲೇ ಆಂಧ್ರಪ್ರದೇಶ–ಒಡಿಶಾ ಕರಾವಳಿಯನ್ನು ದಾಟುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮಂಗಳವಾರ ತಿಳಿಸಿದೆ. ಪಶ್ಚಿಮ–ಮಧ್ಯ ಮತ್ತು ಪಕ್ಕದ ವಾಯುವ್ಯ ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತವು ಶೀಘ್ರದಲ್ಲೇ ತೀವ್ರ ವಾಯುಭಾರ ಕುಸಿತವಾಗಿ ಬದಲಾಗುವ ಸಾಧ್ಯತೆಯಿದೆ ಎಂದು ಐಎಂಡಿ 'ಎಕ್ಸ್'ನಲ್ಲಿ ಹಾಕಿದ ಸಂದೇಶವೊಂದರಲ್ಲಿ ತಿಳಿಸಿದೆ.

ಪಶ್ಚಿಮ–ಮಧ್ಯ ಮತ್ತು ಪಕ್ಕದ ವಾಯುವ್ಯ ಬಂಗಾಳಕೊಲ್ಲಿಯಲ್ಲಿರುವ ವಾಯುಭಾರ ಕುಸಿತವು ಮಂಗಳವಾರ ಬೆಳಗ್ಗೆ 8:30ಕ್ಕೆ ಒಡಿಶಾದ ಗೋಪಾಲಪುರದಿಂದ ಆಗ್ನೇಯಕ್ಕೆ ಸುಮಾರು 200 ಕಿ.ಮೀ, ಆಂಧ್ರಪ್ರದೇಶದ ಕಳಿಂಗಪಟ್ಟಣಂನಿಂದ ಪೂರ್ವ–ಆಗ್ನೇಯಕ್ಕೆ 200 ಕಿ.ಮೀ, ಒಡಿಶಾದ ಪುರಿಯಿಂದ ದಕ್ಷಿಣಕ್ಕೆ 210 ಕಿ.ಮೀ ಮತ್ತು ವಿಶಾಖಪಟ್ಟಣಂನಿಂದ ಪೂರ್ವಕ್ಕೆ 290 ಕಿ.ಮೀ ದೂರದಲ್ಲಿ ಪ್ರದೇಶದಲ್ಲಿ ಕೇಂದ್ರೀಕೃತವಾಗಿತ್ತು ಎಂದು ಅದು ತಿಳಿಸಿದೆ.

### ರಾಷ್ಟ್ರೀಯ ಆಯುರ್ವೇದ ದಿನದ ವಿಶೇಷ ಕವಿತೆ : ಆಯುರ್ವೇದ

ಮುಸ್ಸಂಜೆ ಸಮಯ:

ಜೀವ ಉಳಿಸುವ ಪದ್ಧತಿ
ಆಯುರ್ವೇದ ।
ದೀರ್ಘಾಯುಷ್ಯದ ಗುಟ್ಟು
ಆಯುರ್ವೇದ ।
ವಾತ ಪಿತ್ತ ಕಫ ತ್ರಿದೋಷ
ನಿವಾರಣೆ ಆಯುರ್ವೇದ ।
ಅತ್ಯಂತ ಪುರಾತನ ಪದ್ಧತಿಯ
ಆಯುರ್ವೇದ ।

ಅಥರ್ವಣ ವೇದದಲ್ಲಿ
ಹುಟ್ಟಿಕೊಂಡ
ಆಯುರ್ವೇದ ।
ಪ್ರಕೃತಿದತ್ತವಾದ
ಚಿಕಿತ್ಸೆಯ ಆಯುರ್ವೇದ ।
ಧನ್ವಂತರಿ ಗಿಡಮೂಲಿಕ
ಪದ್ಧತಿ ಆಯುರ್ವೇದ ।
ಮನೆ ಮದ್ದು ಎಂದು ಹೆಸರಾಗಿದ್ದ
ಆಯುರ್ವೇದ ।

ದೇಹ ಶುದ್ಧೀಕರಣದ
ಪಂಚಕರ್ಮ ಆಯುರ್ವೇದ ।
ಉತ್ತಮ ದಿನಚರಿ ಆಹಾರ
ಪದ್ಧತಿಯ ಆಯುರ್ವೇದ ।
ಪುನರ್ವಸು ಆತ್ರೇಯರು
ಶೋಧಿಸಿದ ಆಯುರ್ವೇದ ।
ರೋಗರುಜಿನಗಳ ನಿವಾರಣಾ
ಪದ್ಧತಿ ಆಯುರ್ವೇದ ।



ಡಾ.ಸತ್ಯಮೂರ್ತಿ ಗೂಗಿ, ಬೆಂಗಳೂರು

## ರಾಜ್ಯ ಸರ್ಕಾರದಿಂದ ಆಡಳಿತ ಯಂತ್ರಕ್ಕೆ ಮೇಜರ್ ಸರ್ಜರಿ: 10 IAS ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ

**ಮುಸ್ಸಂಜೆ ಸಮಯ,**
ಬೆಂಗಳೂರು: ರಾಜ್ಯ ಸರ್ಕಾರವು ಆಡಳಿತಾತ್ಮಕ ದೃಷ್ಟಿಯಿಂದ ಮಹತ್ವದ ಹೆಜ್ಜೆಯಿಟ್ಟಿದ್ದು, ಹಲವು ಹಿರಿಯ ಹಾಗೂ ಕಿರಿಯ ಶ್ರೇಣಿಯ ಐಎಎಸ್ (IAS) ಅಧಿಕಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಂಗಳವಾರ ವರ್ಗಾವಣೆ ಮಾಡಿ ಅಧಿಕೃತ ಆದೇಶ ಹೊರಡಿಸಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (DPAR) ಈ ಕುರಿತು ಅಧಿಸೂಚನೆ ಪ್ರಕಟಿಸಿದೆ.

ಉಪ ಮುಖ್ಯಮಂತ್ರಿಗಳ ಕಾರ್ಯದರ್ಶಿ, ಕೃಷಿ ಇಲಾಖೆ ಕಾರ್ಯದರ್ಶಿ ಹಾಗೂ ಹೆಸ್ಕಾಂ (HESCOM), ಎಂಎಸ್ಐಎಲ್ (MSIL) ಸೇರಿದಂತೆ ಪ್ರಮುಖ ನಿಗಮ–ಮಂಡಳಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ (CEO) ಹುದ್ದೆಗಳಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಲಾಗಿದೆ.

* **ಪ್ರಮುಖ ಅಧಿಕಾರಿಗಳ ವರ್ಗಾವಣೆ ವಿವರ ಇಂತಿದೆ:**

ಡಾ. ತ್ರಿಲೋಕ್ ಚಂದ್ರ ಕೆ.ವಿ. (IAS - 2007): ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿಯಾಗಿದ್ದ ಇವರನ್ನು ಕೃಷಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ. ಈ ಹುದ್ದೆಯಲ್ಲಿದ್ದ ಕ್ಯಾಪ್ಟನ್ ಡಾ. ರಾಜೇಂದ್ರ ಕೆ. ಅವರನ್ನು ವರ್ಗಾವಣೆ ಮಾಡಲಾಗಿದೆ.





GOVERNMENT OF KARNATAKA

No: e-DPAR 331 SAS 2026

Karnataka Government Secretariat, Vidhana Soudha, Dr. B.R. Ambedkar Veedhi, Bengaluru, dated: 22.09.2026

NOTIFICATION

**Dr. Thrilok Chandra K.V., IAS (KN:2007)**, Secretary to Government, Planning, Programme Monitoring and Statistics Department, Bengaluru is transferred with immediate effect and posted until further orders as **Secretary to Government, Agriculture Department, Bengaluru** vice Captain Dr. Rajendra K., IAS transferred.

**The transfer of Dr. Rakesh Kumar K., IAS (KN:2012)**, Commissioner, Social Welfare Department, Bengaluru, made in Notification No.: e-DPAR 220 SAS 2026 dated: 07.09.2026 is hereby withdrawn. Further, **Dr. Rakesh Kumar K., IAS** is transferred with immediate effect and posted until further orders as **Secretary to Hon'ble Deputy Chief Minister of Karnataka.**

**Dr. Rakesh Kumar K., IAS (KN:2012)** is also placed in the concurrent charge of the post of **Commissioner, Survey Settlement & Land Records, Bengaluru** with immediate effect and until further orders vice Sri. Venkat Raja, IAS transferred.

**Dr. Arundhathi Chandrashekar, IAS (KN:2012)**, Commissioner for Panchayat Raj, Bengaluru is transferred with immediate effect and posted until further orders as **Commissioner of Treasuries, Bengaluru** relieving Sri. Raghunandan Murthy, IAS from concurrent charge.

**Sri. Patil Yalagouda Shivanagouda, IAS (KN:2012)**, Director, Micro Small and Medium Enterprises, Commerce and Industries Department, Bengaluru is transferred with immediate effect and posted until further orders as **Commissioner for Rural Development, Bengaluru** relieving Ms. Fouzia Taranum B, IAS from concurrent charge.

**Sri. Patil Yalagouda Shivanagouda, IAS (KN:2012)** is also placed in the concurrent charge of the following posts with immediate effect and until further orders:

ಡಾ. ರಾಕೇಶ್ ಕುಮಾರ್ ಕೆ. (IAS - 2012): ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಾಗಿದ್ದ ಇವರ ಹಿಂದಿನ ವರ್ಗಾವಣೆ ಆದೇಶವನ್ನು ರದ್ದುಪಡಿಸಿ, ಇದೀಗ ಮಾನ್ಯ ಉಪ ಮುಖ್ಯಮಂತ್ರಿಗಳ (DCM) ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಜೊತೆಗೆ, ಇವರಿಗೆ ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಆಯುಕ್ತರ ಹುದ್ದೆಯ ಸಮಕಾಲೀನ (ಹೆಚ್ಚುವರಿ) ಹೊಣೆಯನ್ನು ನೀಡಲಾಗಿದೆ.

ಡಾ. ಅರುಂಧತಿ ಚಂದ್ರಶೇಖರ್ (IAS - 2012): ಪಂಚಾಯತ್ ರಾಜ್ ಆಯುಕ್ತರಾಗಿದ್ದ ಇವರನ್ನು ಬೆಂಗಳೂರಿನ ಖಜಾನೆ ಆಯುಕ್ತರನ್ನಾಗಿ (Commissioner of Treasuries) ವರ್ಗಾಯಿಸಲಾಗಿದೆ.

ಪಾಟೀಲ್ ಯಲಗೌಡ ಶಿವನಗೌಡ (IAS - 2012): ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (MSME) ನಿರ್ದೇಶಕರಾಗಿದ್ದ ಇವರನ್ನು ಗ್ರಾಮೀಣಾಭಿವೃದ್ಧಿ ಆಯುಕ್ತರನ್ನಾಗಿ ವರ್ಗಾಯಿಸಲಾಗಿದೆ. ಇದರ ಜೊತೆಗೆ ಪಂಚಾಯತ್ ರಾಜ್ ಆಯುಕ್ತ ಹಾಗೂ 'ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್'ನ ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಗಳ ಹೆಚ್ಚುವರಿ ಹೊಣೆಯನ್ನೂ ವಹಿಸಲಾಗಿದೆ.

**ವೈಶಾಲಿ ಎಂ.ಎಲ್. (IAS - 2013):** ಹುಬ್ಬಳ್ಳಿಯ ಹೆಸ್ಕಾಂ (HESCOM) ವ್ಯವಸ್ಥಾಪಕ ನಿರ್ದೇಶಕಿ (MD) ಆಗಿದ್ದ ಇವರನ್ನು ಬೆಂಗಳೂರಿನ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ (MSIL) ವ್ಯವಸ್ಥಾಪಕ ನಿರ್ದೇಶಕರಾಗಿ ನಿಯೋಜಿಸಲಾಗಿದೆ.

**ಶಶಿಧರ್ ಕುರೇರ (IAS - 2018):** ಕಲಬುರಗಿಯ ಜೆಸ್ಕಾಂ (GESCOM) ವ್ಯವಸ್ಥಾಪಕ ನಿರ್ದೇಶಕರಾಗಿರುವ ಇವರಿಗೆ ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ.

ವಿವರ ಪುಟ–3

## ಮಂಡ್ಯ ಲೋಕಾಯುಕ್ತ ದಾಳಿ: ಹಾಸ್ಟೆಲ್ ವಾರ್ಡನ್ ಮನೆಯಲ್ಲೇ ಮಿನಿಬಾರ್, ಕೈ ಇಟ್ಟಲ್ಲೆಲ್ಲಾ ಕಾಸು, ಕದ್ದ ಮಾಲು!



**ಮುಸಂಜೆ ಸಮಯ,** ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ನಿವೃತ್ತ ಬಿಸಿಎಂ ಹಾಸ್ಟೆಲ್ ಸೂಪರಿಡೆಂಟ್ ಶಿವರಾಜು ಅವರ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ವೇಳೆ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸೇರಬೇಕಿದ್ದ ವಸ್ತುಗಳು, ಅಪಾರ ಪ್ರಮಾಣದ ಮದ್ಯ ಹಾಗೂ ಅಕ್ರಮ ಆಸ್ತಿ ಪತ್ತೆಯಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಬೆಳ್ಳಂ ಬೆಳಗ್ಗೆ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ (BCM) ನಿವೃತ್ತ ಅಧಿಕಾರಿಯೊಬ್ಬರ ಬಣ್ಣ ಬಯಲಾಗಿದೆ. ಮನೆಯಲ್ಲಿ ಕೈ ಇಟ್ಟಲ್ಲೆಲ್ಲಾ ಕಾಸು ಹಾಗೂ ಕದ್ದ ಮಾಲುಗಳು ಪತ್ತೆಯಾಗಿವೆ. ಜೊತೆಗೆ, ಇಡೀ ಮನೆಯನ್ನೇ ಮಿನಿಬಾರ್ ಮಾಡಿಕೊಂಡಿದ್ದಾರೆ.

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ನೀಡಬೇಕಿದ್ದ ಸವಲತ್ತುಗಳು ಹಾಗೂ ಅಗತ್ಯ ಸಾಮಾಗ್ರಿಗಳನ್ನು ಕದ್ದು ಮನೆಯಲ್ಲೇ ದಾಸ್ತಾನು ಮಾಡಿಕೊಂಡಿದ್ದ ನಿವೃತ್ತ ಸೂಪರಿಡೆಂಟ್ ಮನೆಯಲ್ಲಿ ಸಿಕ್ಕ ಸಿರಿತನದ ದೃಶ್ಯ ಕಂಡು ಅಧಿಕಾರಿಗಳೇ ದಂಗಾಗಿದ್ದಾರೆ.

ಮದ್ದೂರಿನ ವಿನಾಯಕ ಬಡಾವಣೆಯಲ್ಲಿರುವ ನಿವೃತ್ತ ಬಿಸಿಎಂ ಹಾಸ್ಟೆಲ್ ಸೂಪರಿಡೆಂಟ್ ಶಿವರಾಜು ಎಂಬುವವರ ಮನೆ ಹಾಗೂ ಅವಸರಹಳ್ಳಿಯಲ್ಲಿರುವ ಅವರ ಫಾರಂ ಹೌಸ್ ಮೇಲೆ ಲೋಕಾಯುಕ್ತ ಪೊಲೀಸರು ಏಕಕಾಲಕ್ಕೆ ದಾಳಿ ನಡೆಸಿದ್ದಾರೆ. ಶಿವರಾಜು ಅವರು ಕಳೆದ ತಿಂಗಳು ಮದ್ದೂರಿನಲ್ಲಿಯೇ ಸೇವೆಯಿಂದ ನಿವೃತ್ತರಾಗಿದ್ದರು.

**ಮನೆಯಲ್ಲಾ ಮಿನಿಬಾರ್, ಕೈ ಇಟ್ಟಲ್ಲೆಲ್ಲಾ ಕದ್ದ ಮಾಲು:**
ಶಿವರಾಜು ಅವರ ಮನೆಯನ್ನು ಶೋಧಿಸಿದ ಲೋಕಾಯುಕ್ತ ಅಧಿಕಾರಿಗಳಿಗೆ ಅಚ್ಚರಿ ಕಾದಿತ್ತು. ಇದು ಮನೆಯೋ ಅಥವಾ ಬಾರ್ ಹಾಗೂ ಗೋದಾಮೋ ಎಂಬ ಅನುಮಾನ ಮೂಡುವಂತೆ ನೂರಾರು ಬೆಲೆಬಾಳುವ ಮದ್ಯದ ಬಾಟಲಿಗಳು ಪತ್ತೆಯಾಗಿವೆ.

ಹಾಸ್ಟೆಲ್ ಮಕ್ಕಳಿಗೆ ಹಂಚಬೇಕಿದ್ದ ಬಟ್ಟೆಬರೆಗಳು, ಸೀರೆಗಳು, ಕೈಗಡಿಯಾರಗಳು (Watches), ಚಿನ್ನ ಹಾಗೂ ಬೆಳ್ಳಿ ಸಾಮಾಗ್ರಿಗಳು ಯಾವುದೇ ಬ್ರ್ಯಾಂಡ್‌ಗಳು ಹಾಳಾಗದಂತೆ, ಒಮ್ಮೆಯೂ ಬಳಕೆ ಮಾಡದ ಹೊಸ ರೂಪದಲ್ಲೇ ತುಂಬಿ ತುಳುಕುತ್ತಿರುವುದು ಪತ್ತೆಯಾಗಿದೆ. ಸರ್ಕಾರದ ಸೌಲಭ್ಯಗಳನ್ನು ಮಕ್ಕಳ ಬಾಯಿಗೆ ಮಣ್ಣುಹಾಕಿ ಈತ ತನ್ನ ಸ್ವಂತ ಮನೆಗೆ ಸಾಗಿಸಿರುವುದು ತನಿಖೆಯಲ್ಲಿ ಬಹಿರಂಗಗೊಂಡಿದೆ.

ಲೋಕಾಯುಕ್ತ ಇನ್‌ಸ್ಪೆಕ್ಟರ್ ಬ್ಯಾಟರಾಯಗೌಡ ನೇತೃತ್ವದಲ್ಲಿ ಮುಂದುವರೆದ ಈ ದಾಳಿಯಲ್ಲಿ, ಶಿವರಾಜು ಅವರ ಅಕ್ರಮ ಆಸ್ತಿ ಹಾಗೂ ಕದ್ದ ಮಾಲುಗಳ ಕರಾಳ ಮುಖ ಹೊರಬಂದಿದ್ದು, ಅಧಿಕಾರಿಗಳು ಕಡತಗಳು ಹಾಗೂ ಸಿಕ್ಕ ಸಿರಿಧನ, ಚಿನ್ನಾಭರಣಗಳನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆ ಮುಂದುವರೆಸಿದ್ದಾರೆ.

## ಹೊಸ ಯೋಜನೆಗಳ ಘೋಷಣೆ: ಸಿಎಂ ಡಿ.ಕೆ.ಶಿವಕುಮಾರ್‌ಗೆ ಹಣಕಾಸು ಇಲಾಖೆಯಿಂದ ಮಹತ್ವದ ಎಚ್ಚರಿಕೆ

**ಮುಸ್ಸಂಜೆ ಸಮಯ,**
ಬೆಂಗಳೂರು: ಕರ್ನಾಟಕದಲ್ಲಿ ಹೊಸ ಯೋಜನೆಗಳ ಘೋಷಣೆಗೆ ಹಣಕಾಸು ಇಲಾಖೆ ಎಚ್ಚರಿಕೆಯ ಗಂಟೆ ನೀಡಿದ್ದು, ಸೆಪ್ಟೆಂಬರ್ 17ರ ಹಣಕಾಸು ಇಲಾಖೆಯ ಟಿಪ್ಪಣಿಯಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯ ವಿವರ ಬಹಿರಂಗಗೊಂಡಿದೆ. 2026–27ರಲ್ಲಿ ರಾಜ್ಯದ ವಿತ್ತೀಯ ಕೊರತೆ 2.95%ಕ್ಕೆ ತಲುಪುವ ಅಂದಾಜಿದ್ದು, ರಾಜ್ಯದ ಆದಾಯ ಕೊರತೆ 22,957 ಕೋಟಿಗಳಾಗಿವೆ.

ಈಖಃಒ ಮಾನದಂಡದ ಪ್ರಕಾರ ಆದಾಯ ಕೊರತೆ ಶೂನ್ಯವಾಗಿರಬೇಕು. ಆದರೆ ರಾಜ್ಯದಲ್ಲಿ ವಿತ್ತೀಯ ಕೊರತೆಯ ಮಿತಿ 3% ಇದೆ ಎಂದು ಹಣಕಾಸು ಇಲಾಖೆ ಉಲ್ಲೇಖಿಸಿದೆ.

ಅನುಮೋದನೆಯಾಗಿರುವ ಕಾಮಗಾರಿಗಳಿಗೇ ಬೇಕಿದೆ ಬೃಹತ್ ಮೊತ್ತ

ಹೊಸ ಯೋಜನೆಗಳಿಗೆ ಹಣಕಾಸು ಒದಗಿಸುವ ಮುನ್ನ ವಾಸ್ತವಿಕ ಲೆಕ್ಕಾಚಾರ ಅಗತ್ಯ. ರಾಜ್ಯದ ಒಟ್ಟು ಸಾಲದ ಹೊಣೆಗಾರಿಕೆ ಉಖಆಕಯ 24.94%ಕ್ಕೆ ಏರಿಕೆಯಾಗಿದ್ದು, ಈಖಃಒ ಅಡಿಯಲ್ಲಿ ನಿಗದಿಯಾಗಿರುವ ಮಿತಿ 25% ಆಗಿದೆ. 2026–27ರ ಬಜೆಟ್ ಘೋಷಣೆಗಳಿಗೆ ಲಭ್ಯವಿರುವ ಸಾಲ ಪಡೆಯುವ ಸಾಮರ್ಥ್ಯ ಬಹುತೇಕ ಬಳಕೆಯಾಗಿದೆ. ರಾಜ್ಯದಲ್ಲಿ ಈಗಾಗಲೇ ಅನುಮೋದನೆಯಾದ ಕಾಮಗಾರಿಗಳ ಬಾಕಿ ವೆಚ್ಚ 2 ಲಕ್ಷ ಕೋಟಿಗೂ ಅಧಿಕವಿದ್ದು, ಅವುಗಳಿಗೇ ಬೃಹತ್ ಪ್ರಮಾಣದ ಹಣಕಾಸಿನ ಅಗತ್ಯವಿದೆ. ಇದರ ನಡುವೆಯೇ ಹೊಸ ಯೋಜನೆಗಳ ಸೇರ್ಪಡೆ ಬಗ್ಗೆ ಹಣಕಾಸು ಇಲಾಖೆ ಕಳವಳ ವ್ಯಕ್ತಪಡಿಸಿದ್ದು, ಬಾಕಿ ಕಾಮಗಾರಿಗಳ ಹೊರೆಯನ್ನು ಮತ್ತಷ್ಟು ಹೆಚ್ಚಿಸಬೇಡಿ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.



**ನಾಲ್ಕು ಇಲಾಖೆಗಳಲ್ಲೇ 36,136 ಕೋಟಿ ಬಿಲ್ ಬಾಕಿ!**
PWD, ಜಲಸಂಪನ್ಮೂಲ, ಸಣ್ಣ ನೀರಾವರಿ ಹಾಗೂ ಖಆಕಖ ಇಲಾಖೆಗಳಲ್ಲಿ ಒಟ್ಟು 36,136 ಕೋಟಿ ಬಿಲ್ ಬಾಕಿಯಿದೆ. ಈಗಿರುವ ಬಾಕಿ ಪಾವತಿಗಳ ನಡುವೆಯೇ ಹೊಸ ಯೋಜನೆಗಳಿಗೆ ಹಣ ಹೊಂದಿಸುವ ಸವಾಲು ಎದುರಾಗಿದೆ. ಹೀಗಾಗಿ ಹೊಸ ಕಾಮಗಾರಿಗಳಿಗಿಂತ ಮೊದಲು ಹಣಕಾಸಿನ ಲಭ್ಯತೆ ಖಚಿತಪಡಿಸಿಕೊಳ್ಳಲು ಹಣಕಾಸು ಇಲಾಖೆ ಸಲಹೆ ನೀಡಿದೆ. 2026–27ರ ಮೊದಲ ಆರು ತಿಂಗಳಲ್ಲೇ 5,000 ಕೋಟಿಗೂ ಹೆಚ್ಚು ಮೊತ್ತದ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಖಇ–1 ಅಡಿಯ ಕಾಮಗಾರಿಗಳೂ ಇದರಲ್ಲಿ ಸೇರಿವೆ. ಆದರೆ ಈ ಕಾಮಗಾರಿಗಳಿಗೆ ಹೆಚ್ಚುವರಿ ಹಣಕಾಸಿನ ಮೂಲ ಇನ್ನೂ ಗುರುತಿಸಿಲ್ಲ ಎಂದು ಇಲಾಖೆ ಉಲ್ಲೇಖಿಸಿದೆ. ಈ ನಡುವೆ ಜಲಸಂಪನ್ಮೂಲ, ಇಂಧನ, ವಾಣಿಜ್ಯ ಮತ್ತು ಕೈಗಾರಿಕೆ, ನಗರಾಭಿವೃದ್ಧಿ ಹಾಗೂ ಸಾರಿಗೆ ಇಲಾಖೆಗಳಿಂದ ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಇದೆ. ಬೃಹತ್ ಪ್ರಮಾಣದ ಹೆಚ್ಚುವರಿ ಅನುದಾನದ ಪ್ರಸ್ತಾವನೆಗಳು ಹಣಕಾಸು ಇಲಾಖೆ ಮುಂದೆ ಬಾಕಿ ಇರುವ ನಡುವೆಯೇ ಹೊಸ ಯೋಜನೆಗಳಿಗೆ ಹಣ ಒದಗಿಸುವುದು ಕಷ್ಟ ಎಂಬ ಅಭಿಪ್ರಾಯ ಹಣಕಾಸು ಇಲಾಖೆಯದ್ದಾಗಿದೆ.

**ಬರದಿಂದ ಬೊಕ್ಕಸಕ್ಕೆ ಮತ್ತಷ್ಟು ಹೊರೆ?:** ತೀವ್ರ ಬರ ಪರಿಸ್ಥಿತಿಯಿಂದ ಸರ್ಕಾರದ ವೆಚ್ಚ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಬರ ಪರಿಹಾರಕ್ಕೆ ಎಷ್ಟು ಹೆಚ್ಚುವರಿ ಹಣ ಬೇಕಾಗಬಹುದು ಎಂಬುದು ಕೇಂದ್ರದ ಪ್ರತಿಕ್ರಿಯೆಯ ಮೇಲೆ ಅವಲಂಬಿತವಾಗಿದ್ದು, ಬರದ ಪರಿಣಾಮ IP-SET ವಿದ್ಯುತ್ ಸಬ್ಸಿಡಿ ಹೊರೆ ಭಾರೀ ಪ್ರಮಾಣದಲ್ಲಿ ಹೆಚ್ಚುವ ಸಾಧ್ಯತೆ ಇದೆ. ಇದಕ್ಕೆ ಹೆಚ್ಚುವರಿ 4,000–5,000 ಕೋಟಿ ಬೇಕಾಗಬಹುದೆಂದು ಅಂದಾಜಿಸಲಾಗಿದೆ.

## ಬೆಂಗಳೂರಿನಲ್ಲಿ 'ನಮ್ಮ ಮೆಟ್ರೋ' ಪ್ರಯಾಣವೂ ದುಬಾರಿ!: ತಿಂಗಳಿಗೆ 3520 ಖರ್ಚು; 70 ಸಾವಿರ ಸಂಬಳವೂ ಸಾಲದು ಎಂದ ವರದಿ!

**ಮುಸ್ಸಂಜೆ ಸಮಯ,**
ಬೆಂಗಳೂರಿನಲ್ಲಿ ದಿನನಿತ್ಯದ ದಟ್ಟಣೆ ಮತ್ತು ಸುದೀರ್ಘ ಸಂಚಾರದ ನಡುವೆ ನಮ್ಮ ಮೆಟ್ರೋ ಪ್ರಯಾಣಿಕರಿಗೆ ಅತ್ಯಂತ ಪ್ರಮುಖವಾದ ಸಾರ್ವಜನಿಕ ಸಾರಿಗೆಯಾಗಿದೆ. ರಸ್ತೆ ಮಾರ್ಗದ ಪ್ರಯಾಣಕ್ಕೆ ಹೋಲಿಸಿದರೆ ಮೆಟ್ರೋದಲ್ಲಿ ಸಮಯದ ನಿಖರತೆ ಇರುತ್ತದೆ. ಆದಾಗ್ಯೂ, ವಿಶಿಷ್ಟ ಪ್ರಯಾಣದ ಮಾದರಿಯೊಂದರ ಅಡಿಯಲ್ಲಿ ಮಾಸಿಕ ಮೆಟ್ರೋ ಖರ್ಚು ಮತ್ತು ಅದಕ್ಕೆ ಅಗತ್ಯವಿರುವ ಮಾಸಿಕ ಆದಾಯದ ಕುರಿತು ಇತ್ತೀಚೆಗೆ ಚರ್ಚೆಗಳು ಆರಂಭವಾಗಿವೆ.

ಪ್ರತಿ ದಿನ ಒಂದು ಕಡೆಗೆ 15 ಕಿ.ಮೀ ಹಾಗೂ ಎರಡೂ ತುದಿಗಳಲ್ಲಿ ತಲಾ 2 ಕಿ.ಮೀ ಕೊನೆಯ ಮೈಲಿ (Last-mile) ಪ್ರಯಾಣಿಸುವ ವ್ಯಕ್ತಿಯು ತಿಂಗಳಿಗೆ ಅಂದಾಜು 3,520 ರೂ.ಗಳನ್ನು ಪ್ರಯಾಣಕ್ಕಾಗಿ ಖರ್ಚು ಮಾಡಬೇಕಾಗುತ್ತದೆ ಎಂದು 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ವಿಶ್ಲೇಷಣೆಯು ತಿಳಿಸಿದೆ.

ಸಾರಿಗೆ ವೆಚ್ಚವು ಮಾಸಿಕ ಕೈಗೆ ಸಿಗುವ ಆದಾಯದ (Take-home income) ಶೇ. 5ಕ್ಕಿಂತ ಹೆಚ್ಚಿರಬಾರದು ಎಂಬ ಆರ್ಥಿಕ ತಜ್ಞರ ನಿಯಮದ ಪ್ರಕಾರ ಈ ಲೆಕ್ಕಾಚಾರ ಮಾಡಲಾಗಿದೆ. ಅಂದಾಜು 3,520 ರೂ. ಮಾಸಿಕ ಪ್ರಯಾಣ ವೆಚ್ಚದ ಆಧಾರದ ಮೇಲೆ, ಆದಾಯವು ಶೇ. 5ರಷ್ಟಿರಬೇಕಾದರೆ ವ್ಯಕ್ತಿಯ ಮಾಸಿಕ ಆದಾಯವು ಸುಮಾರು 70,400 ರೂ. ಇರಬೇಕು ಎಂಬ ತರ್ಕವನ್ನು ಇದು ಮುಂದಿಡುತ್ತದೆ.

ಆದಾಗ್ಯೂ, ನಮ್ಮ ಮೆಟ್ರೋ ಬಳಸಲು ಕನಿಷ್ಠ 70,000 ರೂ. ಸಂಬಳವಿರಲೇಬೇಕು ಎಂದರ್ಥವಲ್ಲ. ಪ್ರಯಾಣಿಸುವ ದೂರ, ಕಚೇರಿಗೆ



ಹೋಗುವ ದಿನಗಳ ಸಂಖ್ಯೆ, ಮೆಟ್ರೋ ದರ ಹಾಗೂ ಕೊನೆಯ ಮೈಲಿ ಸಾರಿಗೆಯ ವೆಚ್ಚಕ್ಕೆ ತಕ್ಕಂತೆ ನಿಜವಾದ ಪ್ರಯಾಣದ ಖರ್ಚು ವ್ಯತ್ಯಾಸಗೊಳ್ಳುತ್ತದೆ.

ಇದೇ ರೀತಿಯ ಪ್ರಯಾಣಕ್ಕೆ ದೆಹಲಿಯಲ್ಲಿ ತಿಂಗಳಿಗೆ ಸುಮಾರು 2,772 ರೂ., ಚೆನ್ನೈನಲ್ಲಿ 2,200 ರೂ., ಮುಂಬೈನಲ್ಲಿ 1,980 ರೂ. ಹಾಗೂ ಕೋಲ್ಕತ್ತಾದಲ್ಲಿ 1,760 ರೂ. ಖರ್ಚಾಗಬಹುದು ಎಂದು ಅಂದಾಜಿಸಲಾಗಿದೆ. ಬೆಂಗಳೂರಿನಲ್ಲಿ ಉಪನಗರ ರೈಲು ಜಾಲದ ಕೊರತೆಯಿರುವುದು ಕೂಡ ಸಾರಿಗೆ ವೆಚ್ಚದ ಮೇಲೆ ಪರಿಣಾಮ ಬೀರುತ್ತದೆ.

ದಟ್ಟಣೆಯ ರಸ್ತೆಗಳ ಬದಲು ಮೆಟ್ರೋ ಪ್ರಯಾಣವು ಸಮಯ ಉಳಿಸಲು ಸಹಾಯ ಮಾಡುತ್ತದೆ. ಆಟೋ ಅಥವಾ ಕ್ಯಾಬ್‌ಗಳಲ್ಲಿ ಪ್ರಯಾಣಿಸುವುದಕ್ಕಿಂತ ಮೆಟ್ರೋದಲ್ಲಿ ಪ್ರಯಾಣಿಸುವುದು ಕಡಿಮೆ ವೆಚ್ಚದ್ದಾಗಿದೆ. ಉದಾಹರಣೆಗೆ, ಇದೇ ರೀತಿಯ ದೈನಂದಿನ ಪ್ರಯಾಣಕ್ಕೆ ಆಟೋದಲ್ಲಿ ತಿಂಗಳಿಗೆ 14,000 ರೂ.ಗಳಿಗಿಂತ ಹೆಚ್ಚು ಖರ್ಚಾಗಬಹುದು.

ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ಮೆಟ್ರೋ ಜಾಲವು ಮತ್ತಷ್ಟು ವಿಸ್ತರಣೆಯಾಗುತ್ತಿದೆ. ಕೇಂದ್ರ ಸರ್ಕಾರವು ನಮ್ಮ ಮೆಟ್ರೋ ಹಂತ–3 (Phase 3) ಯೋಜನೆಗೆ ಅನುಮೋದನೆ ನೀಡಿದ್ದು, ಇದು ಬೆಂಗಳೂರಿನ ವಿವಿಧ ಭಾಗಗಳ ನಡುವಿನ ಸಂಪರ್ಕವನ್ನು ಮತ್ತಷ್ಟು ಸುಧಾರಿಸಲಿದೆ. ಒಟ್ಟಾರೆಯಾಗಿ, 70,400 ರೂ. ಎಂಬುದು ಒಂದು ನಿರ್ದಿಷ್ಟ ಪ್ರಯಾಣದ ಮಾದರಿ ಮತ್ತು ಶೇ. 5ರ ಆರ್ಥಿಕ ನಿಯಮದ ಮೇಲಿನ ಲೆಕ್ಕಾಚಾರವಾಗಿದ್ದು, ಪ್ರತಿಯೊಬ್ಬರ ನೈಜ ಖರ್ಚು ಅವರ ಪ್ರಯಾಣದ ದೂರ ಮತ್ತು ದಿನಗಳ ಮೇಲೆ ಅವಲಂಬಿತವಾಗಿರುತ್ತದೆ.

## ರಾಜ್ಯ ಸರ್ಕಾರದಿಂದ ಮತ್ತೆ 53 ತಾಲೂಕುಗಳು ಬರಪೀಡಿತ ಎಂದು ಘೋಷಣೆ : ಒಟ್ಟು 177 ತಾಲೂಕುಗಳು ಬರಪೀಡಿತ ಪಟ್ಟಿಗೆ

**ಮುಸ್ಸಂಜೆ ಸಮಯ,**
ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆ ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು ಹೆಚ್ಚುವರಿಯಾಗಿ 53 ತಾಲೂಕುಗಳನ್ನು ಬರಪೀಡಿತ ಎಂದು ಅಧಿಕೃತವಾಗಿ ಘೋಷಿಸಿ ಆದೇಶ ಹೊರಡಿಸಿದೆ. ಈ ಮೂಲಕ ಬರಪೀಡಿತ ತಾಲೂಕುಗಳ ಸಂಖ್ಯೆ 177ಕ್ಕೆ ಏರಿಕೆಯಾಗಿದೆ.

ಕಂದಾಯ ಇಲಾಖೆಯ (ವಿಪತ್ತು ನಿರ್ವಹಣೆ) ಕಾರ್ಯದರ್ಶಿ ಹಾಗೂ ಪರಿಹಾರ ಆಯುಕ್ತರಾದ ಮನೋಜ್ ಕುಮಾರ್ ಮೀನಾ ಅವರು ಈ ಕುರಿತು ಅಧಿಕೃತ ಆದೇಶ (ಆದೇಶ ಸಂ: RD 586 TNR 2026 (PART 1)) ಹೊರಡಿಸಿದ್ದಾರೆ.

**51 ತಾಲೂಕುಗಳಲ್ಲಿ ತೀವ್ರ ಬರ, 2 ತಾಲೂಕುಗಳಲ್ಲಿ ಸಾಧಾರಣ ಬರ**
ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC) ಸಲ್ಲಿಸಿದ ವೈಜ್ಞಾನಿಕ ವರದಿ ಹಾಗೂ 17 ಜಿಲ್ಲೆಗಳ 574 ಹಳ್ಳಿಗಳಲ್ಲಿ ನಡೆಸಲಾದ ಬೆಳೆ ಸಮೀಕ್ಷೆ (Ground Truthing) ಆಧಾರದ ಮೇಲೆ ಈ ನಿರ್ಧಾರ ಕೈಗೊಳ್ಳಲಾಗಿದೆ. ಹೊಸದಾಗಿ ಘೋಷಿಸಲಾದ 53 ತಾಲೂಕುಗಳಲ್ಲಿ.

**51 ತಾಲೂಕುಗಳು: ತೀವ್ರ ಬರಪೀಡಿತ (Severe)**

2 ತಾಲೂಕುಗಳು: ಸಾಧಾರಣ ಬರಪೀಡಿತ (Moderate – ಬೆಂಗಳೂರು ದಕ್ಷಿಣ ಹಾಗೂ ಉಡುಪಿ ಜಿಲ್ಲೆಯ ಬ್ರಹ್ಮಾವರ)

ಈ ಘೋಷಣೆಯು ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ ಆರು ತಿಂಗಳ ಕಾಲ ಜಾರಿಯಲ್ಲಿರುತ್ತದೆ.



**ಬರಪೀಡಿತ ತಾಲೂಕುಗಳ ಪಟ್ಟಿ (ಜಿಲ್ಲಾವಾರು):**
ಬೆಳಗಾವಿ: ಅಥಣಿ, ಬೈಲಹೊಂಗಲ, ಬೆಳಗಾವಿ, ಚಿಕ್ಕೋಡಿ, ಕಿತ್ತೂರು, ಮೂಡಲಗಿ, ನಿಪ್ಪಾಣಿ, ರಾಯಬಾಗ, ಯರಗಟ್ಟಿ.
ಹಾವೇರಿ: ಬ್ಯಾಡಗಿ, ಹಾನಗಲ್, ಹಾವೇರಿ, ರಾಣೆಬೆನ್ನೂರು, ಸವಣೂರು, ಶಿಗ್ಗಾಂವಿ.
ಯಾದಗಿರಿ: ಗುರುಮಿಠಕಲ್, ಹುಣಸಗಿ, ಶೋರಾಪುರ, ವಡಗೇರಾ, ಯಾದಗಿರಿ.
ಕಲಬುರಗಿ: ಚಿಂಚೋಳಿ, ಜೇವರ್ಗಿ, ಕಾಳಗಿ, ಕಮಲಾಪುರ, ಸೇಡಂ.
ಬಾಗಲಕೋಟೆ: ಬಾದಾಮಿ, ಹುನಗುಂದ, ಮುಧೋಳ, ರಬಕವಿ–ಬನಹಟ್ಟಿ, ತೇರದಾಳ.
ವಿಜಯಪುರ: ಆಲಮೇಲ, ದೇವರ ಹಿಪ್ಪರಗಿ, ಮುದ್ದೇಬಿಹಾಳ, ಸಿಂದಗಿ.
ಚಿತ್ರದುರ್ಗ: ಚಿತ್ರದುರ್ಗ, ಹೊಳಲ್ಕೆರೆ, ಮೊಳಕಾಲ್ಮೂರು.
ಗದಗ: ಲಕ್ಷ್ಮೇಶ್ವರ, ನರಗುಂದ, ಶಿರಹಟ್ಟಿ.
ಹಾಸನ: ಆಲೂರು, ಬೇಲೂರು.
ಕೊಪ್ಪಳ: ಕೊಪ್ಪಳ, ಯಲಬುರ್ಗಾ.
ವಿಜಯನಗರ: ಕೊಟ್ಟೂರು, ಕೂಡ್ಲಿಗಿ.
ಬಳ್ಳಾರಿ: ಸಿರುಗುಪ್ಪ.
ದಾವಣಗೆರೆ: ಹರಿಹರ.
ಬೆಂಗಳೂರು ಗ್ರಾಮಾಂತರ: ದೊಡ್ಡಬಳ್ಳಾಪುರ.
ಬೆಂಗಳೂರು ನಗರ: ಬೆಂಗಳೂರು ದಕ್ಷಿಣ (ಸಾಧಾರಣ ಬರ).
ಬೀದರ್: ಹುಲಸೂರ, ಕಮಲಾನಗರ.
ಉಡುಪಿ: ಬ್ರಹ್ಮಾವರ (ಸಾಧಾರಣ ಬರ). ಪರಿಹಾರ ಕಾರ್ಯಗಳಿಗೆ ಸೂಚನೆ:

ಬರಪೀಡಿತ ತಾಲೂಕುಗಳಲ್ಲಿ SDRF ನಿಯಮಾವಳಿಗಳ ಅನ್ವಯ ಅಗತ್ಯವಿರುವ ಕುಡಿಯುವ ನೀರು, ಮೇವು ಸರಬರಾಜು ಹಾಗೂ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸರ್ಕಾರ ಅಧಿಕಾರ ನೀಡಿದೆ. ಜತೆಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳೊಂದಿಗೆ ಬೆಳೆ ಹಾನಿ ಜಂಟಿ ಸಮೀಕ್ಷೆ ನಡೆಸಿ ಶೀಘ್ರ ವರದಿ ಸಲ್ಲಿಸಲು ಆದೇಶಿಸಲಾಗಿದೆ.

## ಗೃಹಲಕ್ಷ್ಮಿ ಯೋಜನೆಗೆ ಪತಿ ಆಧಾರ್ ಕಾರ್ಡ್ ಕೂಡ ಕಡ್ಡಾಯ: ಹೊಸ ಮಾರ್ಗಸೂಚಿಯೊಂದಿಗೆ ಫಲಾನುಭವಿಗಳ ಮರು ಪರಿಶೀಲನೆ

**ಮುಸ್ಸಂಜೆ ಸಮಯ,**
ಬೆಂಗಳೂರು: ಗೃಹಲಕ್ಷ್ಮಿ ಯೋಜನೆಗೆ ಪತಿ ಆಧಾರ್ ಕಾರ್ಡ್ ಕೂಡ ಕಡ್ಡಾಯಗೊಳಿಸುವ ಹೊಸ ಮಾರ್ಗಸೂಚಿ ಸಿದ್ಧಪಡಿಸಲಾಗಿದ್ದು, ಎಸ್‌ಐಆರ್ ಬಳಿಕ ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳ ಮರು ಪರಿಶೀಲನೆ ನಡೆಸಲಾಗುವುದು.

ಗೃಹಲಕ್ಷ್ಮಿ ಯೋಜನೆಗೆ ಮನೆಯ ಯಜಮಾನಿಯ ಆಧಾರ್ ಕಾರ್ಡ್ ಮಾತ್ರವಲ್ಲದೇ, ಯಜಮಾನನ ಆಧಾರ್ ಲಿಂಕ್ ಕೂಡ ಕಡ್ಡಾಯಗೊಳಿಸಲಾಗಿದೆ.

ಸಾಲ ಇಲ್ಲದಿರುವ ಬ್ಯಾಂಕ್ ಖಾತೆಯನ್ನೇ ಹೊಂದಿರಬೇಕು. ಆಧಾರ್ ಕಾರ್ಡ್ ನಲ್ಲಿ ಇರುವಂತೆ ಫಲಾನುಭವಿಗಳ ಹೆಸರು ಮತ್ತು ವಿಳಾಸ ಇರಬೇಕು. ಇಲ್ಲದಿದ್ದರೆ ಗೃಹಲಕ್ಷ್ಮಿ ಯೋಜನೆಯ ಲಾಭ ಸಿಗುವುದಿಲ್ಲವೆಂದು ಹೇಳಲಾಗಿದೆ.

ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾಗಿರುವ ಗೃಹಲಕ್ಷ್ಮಿ ಯೋಜನೆಯ ಮರು ಪರಿಶೀಲನೆಯೊಂದಿಗೆ ಅರ್ಹರನ್ನು ಮಾತ್ರ ಯೋಜನೆಗೆ ಪರಿಗಣಿಸಲು ಹಲವು ಅಂಶ ಒಳಗೊಂಡ ಹೊಸ ಮಾರ್ಗಸೂಚಿಯನ್ನು ಸರ್ಕಾರ ರೂಪಿಸಿದೆ.

ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ವಿವರ, ಪಡಿತರ ಚೀಟಿ ಪರಿಶೀಲನೆ, ಫೇಶಿಯಲ್ ದೃಢೀಕರಣವನ್ನು ಕೂಡ ಫಲಾನುಭವಿಗಳಿಗೆ ಕಡ್ಡಾಯಗೊಳಿಸ




ಲಾಗಿದೆ. ಇದಕ್ಕಾಗಿ ಗಣತಿದಾರರನ್ನು ನಿಯೋಜಿಸಲಾಗಿದ್ದು, ಗಣತಿದಾರರೇ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಲಿದ್ದಾರೆ. ಇದಕ್ಕಾಗಿ 17 ಪ್ರಶ್ನೆಗಳ ಹೊಸ ಅರ್ಜಿಯನ್ನು ಕೂಡ ಸಿದ್ಧಪಡಿಸಲಾಗಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಪ್ಪಿಗೆ ನೀಡಿದ ಕೂಡಲೇ ಮರು ಪರಿಶೀಲನೆ ಕಾರ್ಯವನ್ನು ಮುಂದುವರಿಸಲಾಗುವುದು. ಮತದಾರರ ಅಂತಿಮ ಪಟ್ಟಿ ಪ್ರಕಟವಾದ ಬಳಿಕ ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳ ಮರು ಪರಿಶೀಲನೆ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಫಲಾನುಭವಿಗಳ ಅರ್ಹತೆ ಪರಿಶೀಲಿಸಿ ನೈಜ ಫಲಾನುಭವಿಗಳಿಗೆ ಮಾತ್ರ ಸೌಲಭ್ಯವನ್ನು ಮುಂದುವರೆಸುವ ಉದ್ದೇಶದಿಂದ ರಾಜ್ಯ ಸರ್ಕಾರ ಕಾರ್ಯಾಚರಣೆ ವಿಧಾನ ಮತ್ತು ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅದೀನದಲ್ಲಿ ಪರಿಶೀಲನಾ ಪ್ರಕ್ರಿಯೆ ನಡೆಯಲಿದೆ.

ನಗರ ಮತ್ತು ಗ್ರಾಮೀಣ ಪ್ರದೇಶ ಫಲಾನುಭವಿಗಳ ಮನೆ ಮನೆ ಸಮೀಕ್ಷೆ ದಾಖಲೆಗಳ ಪರಿಶೀಲನೆ ಬಯೋಮೆಟ್ರಿಕ್ ಅಥವಾ ಫೇಶಿಯಲ್ ದೃಢೀಕರಣ, ಬ್ಯಾಂಕ್ ಖಾತೆ ವಿವರಗಳ ಪರಿಶೀಲನೆಗೆ ಆದ್ಯತೆ ನೀಡಲಾಗುವುದು ಎಂದು ಹೇಳಲಾಗಿದೆ.

ವಿವರ ಪುಟ–3

ಮುಸ್ಸಂಜೆ ಸಮಯ

23 ಬುಧವಾರ ಸೆಪ್ಟೆಂಬರ್ 2026
23 Wednesday Sept. 2026

# 800 ಜನರ ಪ್ರಾಣ ತೆಗೆದ ಮೋದಿ!: ಪರಿಷತ್‌ನಲ್ಲಿ ಬಿ.ಕೆ ಹರಿಪ್ರಸಾದ್ ಗಂಭೀರ ಆರೋಪ!

**ಮುಸ್ಸಂಜೆ ಸಮಯ,**
ಬೆಂಗಳೂರು: ನಿನ್ನೆಯಿಂದ ಪ್ರಾರಂಭವಾಗಿರುವ ವಿಧಾನ ಪರಿಷತ್ ಅಧಿವೇಶನದಲ್ಲಿ ಇಂದು ಕೂಡಾ ಉಭಯ ಪಕ್ಷಗಳ ನಾಯಕರ ನಡುವೆ ಗದ್ದಲ ಏರ್ಪಟ್ಟಿದೆ. ಮುಖ್ಯವಾಗಿ ಕಸ್ತೂರಿ ರಂಗನ್ ವರದಿ ಕುರಿತಂತೆ ಪರ ವಿರೋಧ ಚರ್ಚೆಗಳು ತೀವ್ರವಾಗಿದ್ದು, ಇದೇ ಸಂದರ್ಭ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ವಿಧಾನ ಪರಿಷತ್ ಅಧಿವೇಶದ ಸಂದರ್ಭ ಏರ್ಪಟ್ಟ ಗದ್ದಲದ ನಡುವೆ ಎದ್ದು ನಿಂತು ಆಕ್ರೋಶ ಹೊರ ಹಾಕಿದ ಬಿ.ಕೆ ಹರಿಪ್ರಸಾದ್, ನಾನು ಈಗಲೂ ಹೇಳುವೆ, ಪ್ರಧಾನಿ ನರೇಂದ್ರ ಮೋದಿ ಅವರು 800 ರೈತರ ಕೊಲೆ ಮಾಡಿದ್ದಾರೆ. ಅವರಿಂದಾಗಿ ದೇಶಾದ್ಯಂತ 800 ಅನ್ನದಾತರ ಕೊಲೆ ಆಗಿದೆ ಎಂದು ನಾಲಿಗೆ ಹರಿಬಿಟ್ಟಿದ್ದಾರೆ.

ಇದೇ ವೇಳೆ ಸದನದ ಗದ್ದಲವನ್ನು ತಣ್ಣಗಾಗಿಸಲು ಸ್ಪೀಕರ್ ಸಲೀಂ ಅಹಮದ್ ಎದ್ದುನಿಂತು ಎಲ್ಲರನ್ನು ಶಾಂತರಾಗುವಂತೆ ಮನವಿ ಮಾಡಿಕೊಂಡಿದ್ದಾರೆ. ಸಭಿಕರ ಗದ್ದಲ ಹೆಚ್ಚಾದಂತೆ ಗುಡುಗಿದ ಸ್ಪೀಕರ್, ಸದನದಲ್ಲಿ ಹೇಗಿರಬೇಕು ಎಂಬುದರ ಬಗ್ಗೆ ಸ್ವಲ್ಪ ಸೆನ್ಸ್ ಇರಬೇಕು. ನಾನು ನಿಂತುಕೊಂಡು ಮಾತನಾಡುತ್ತಿದ್ದೇನೆ ಎಂದರೆ ನೀವೆಲ್ಲರೂ ಶಾಂತರಾಗಿ ಕುಳಿತುಕೊಳ್ಳಬೇಕು.



ಒಬ್ಬೊಬ್ಬರಾಗಿ ಮಾತನಾಡಲು ಎಲ್ಲರಿಗೂ ಅವಕಾಶ ನೀಡುತ್ತೇವೆ. ಇದೇನು ಫಿಶ್ ಮಾರ್ಕೆಟ್ ಅಲ್ಲ ಎಂದು ಗದರಿದ್ದಾರೆ.

ಕೇಂದ್ರ ಸರ್ಕಾರ ಹೊರಡಿಸಿರುವ ಕಸ್ತೂರಿ ರಂಗನ್ ವರದಿಯ ಕರಡು ಅಧಿಸೂಚನೆಗೆ ತೀವ್ರ ವಿರೋಧ ವ್ಯಕ್ತವಾಗಿದೆ. ಸೋಮವಾರ ನಡೆದ ಉಭಯ ಸದನಗಳ ಚರ್ಚೆಯಲ್ಲಿ ಆಡಳಿತ ಹಾಗೂ ಪ್ರತಿಪಕ್ಷಗಳ ಸದಸ್ಯರೆಲ್ಲರೂ ಒಗ್ಗೂಡಿ ವರದಿಯನ್ನು ತಿರಸ್ಕರಿಸಿದ್ದು, ಉಪಗ್ರಹ ಆಧಾರಿತ ಸಮೀಕ್ಷೆ ಬದಲು ಕೇರಳ ಮಾದರಿಯಲ್ಲಿ ಭೌತಿಕ ಸಮೀಕ್ಷೆ ನಡೆಸಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ (ಎನ್‌ಜಿಟಿ) ಸಮಗ್ರ ವರದಿ ಸಲ್ಲಿಸಬೇಕೆಂದು ಆಗ್ರಹಿಸಿದ್ದಾರೆ.

ದಶಕದ ಹಿಂದೆ ಉಪಗ್ರಹಗಳ ಮೂಲಕ ನಡೆಸಿರುವ ಸಮೀಕ್ಷೆಯು ವೈಜ್ಞಾನಿಕವಾಗಿಲ್ಲ ಹಾಗೂ ವಾಸ್ತವ ಸ್ಥಿತಿಗೆ ದೂರವಾಗಿದೆ ಎಂದು ಸದಸ್ಯರು ಆಕ್ಷೇಪಿಸಿದರು. ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಜನವಸತಿ ಪ್ರದೇಶಗಳು, ಕಾಫಿ ಮತ್ತು ಏಲಕ್ಕಿ ತೋಟಗಳನ್ನು ಸೇರಿಸಿರುವುದರಿಂದ ಮಲೆನಾಡು ಹಾಗೂ ಪಶ್ಚಿಮ ಘಟ್ಟ ಭಾಗದ ಜನರ ಬದುಕು ಸಂಕಷ್ಟಕ್ಕೆ ಸಿಲುಕಲಿದೆ. ಕೃಷಿಕರು, ಅರಣ್ಯವಾಸಿಗಳು ಮತ್ತು ಬಡವರ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿರಬೇಕು ಹಾಗೂ ನುರಿತ ವಕೀಲರ ಮೂಲಕ ಕಾನೂನು ಹೋರಾಟ ಮುಂದುವರಿಸಬೇಕು ಎಂದು ಒತ್ತಾಯಿಸಿದ್ದಾರೆ.

# ರಾಜ್ಯದಲ್ಲಿ ನಂದಿನಿ ಹಾಲಿನ ದರ ಹೆಚ್ಚಳ ಫಿಕ್ಸ್: ಸುಳಿವು ನೀಡಿದ ಸಿಎಂ ಡಿ.ಕೆ ಶಿವಕುಮಾರ್

**ಮುಸ್ಸಂಜೆ ಸಮಯ,**
ಬೆಂಗಳೂರು: ನಂದಿನಿ ಹಾಲಿನ ಖರೀದಿ ಮತ್ತು ಮಾರಾಟ ದರವನ್ನು ಪ್ರತಿ ಲೀಟರ್‌ಗೆ ರೂ.8ರಿಂದ ರೂ.10ರಷ್ಟು ಹೆಚ್ಚಿಸಲು ಕರ್ನಾಟಕ ರಾಜ್ಯದ ಸಹಕಾರ ಹಾಲು ಉತ್ಪಾದಕರ ಒಕ್ಕೂಟಗಳ ನಿಯೋಗ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

ವಿಧಾನಸೌಧದಲ್ಲಿ ಶಿವಕುಮಾರ್ ಅವರನ್ನು ಹಾಲು ಒಕ್ಕೂಟಗಳ ನಿಯೋಗವು ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಅವರು, "ಕಳೆದ 10 ವರ್ಷಗಳಲ್ಲಿ ಪಶು ಆಹಾರ ದರದಲ್ಲಿನ ಹೆಚ್ಚಳ, ಪ್ರತಿ ಲೀಟರ್ ಹಾಲು ಉತ್ಪಾದನೆಗೆ ತಗಲುವ ವೆಚ್ಚ, ಜಿಲ್ಲೆಗಳಲ್ಲಿ ಎಷ್ಟು ಪ್ರಮಾಣದ ಹಾಲು, ಒಕ್ಕೂಟ ಹೊರತುಪಡಿಸಿ ಬೇರೆ ಕಡೆ ಮಾರಾಟವಾಗುತ್ತಿದೆ? ಒಕ್ಕೂಟ ಎಷ್ಟು ಖರೀದಿಸುತ್ತಿದೆ? ನೆರೆಯ ರಾಜ್ಯಗಳಲ್ಲಿ ಹಾಲು ಖರೀದಿ ಮತ್ತು ಮಾರಾಟ ದರದ ವಿವರ ಸೇರಿದಂತೆ ಸಮಗ್ರ ಮಾಹಿತಿಯನ್ನು ಸಲ್ಲಿಸಿ" ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಿಯೋಗದ ಪರವಾಗಿ ಮಾತನಾಡಿದ ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್, "ಹೈನುಗಾರಿಕೆಗೆ ಅಗತ್ಯವಿರುವ ಪಶು ಆಹಾರ, ಮೇವು, ಔಷಧೋಪಚಾರ ಸೇರಿದಂತೆ ನಿರ್ವಹಣಾ ವೆಚ್ಚ ನಿರಂತರವಾಗಿ



ಹೆಚ್ಚಾಗುತ್ತಿರುವುದರಿಂದ ಹಾಲಿನ ಉತ್ಪಾದನಾ ವೆಚ್ಚ ಗಣನೀಯವಾಗಿ ಹೆಚ್ಚಾಗಿದೆ. ಸದ್ಯದ ಬರ ಪರಿಸ್ಥಿತಿಯಲ್ಲಿ ಬೆಳೆ ಕೊರತೆಯಿಂದ ವ್ಯವಸಾಯ ಆದಾಯ ತೀವ್ರವಾಗಿ ಕುಸಿದಿದ್ದು, ಮೇವಿನ ಲಭ್ಯತೆ ಕಡಿಮೆಯಾಗಿ ರುವುದರಿಂದ ಹೈನುಗಾರರು ಸಂಕಷ್ಟ ಎದುರಿಸುತ್ತಿದ್ದಾರೆ" ಎಂದು ವಿವರಿಸಿದರು.

"ವಿವಿಧ ರಾಜ್ಯಗಳ ಸಹಕಾರಿ ಸಂಸ್ಥೆಗಳು ಹಾಗೂ ಖಾಸಗಿ ಡೇರಿಗಳು ನಿರಂತರವಾಗಿ ಹಾಲು ಮತ್ತು ಹಾಲಿನ ಉತ್ಪನ್ನ ದರಗಳನ್ನು ಏರಿಕೆ ಮಾಡುತ್ತಿವೆ. ಗ್ರಾಹಕರ ಹಿತದೃಷ್ಟಿಯಿಂದ ಕಳೆದ ಒಂದೂವರೆ ವರ್ಷಗಳಿಂದ ಹಾಲಿನ ದರವನ್ನು ನಾವು ಹೆಚ್ಚಳ ಮಾಡಿರುವುದಿಲ್ಲ. ಖಾಸಗಿ ಸಂಸ್ಥೆಗಳು ಹೆಚ್ಚಿನ ಹಾಲಿನ ಶೇಖರಣೆಗೆ ಪ್ರಯತ್ನಿಸುತ್ತಿದ್ದು, ಒಕ್ಕೂಟಗಳು ಹಾಲು ಶೇಖರಣೆಗೆ ತೀವ್ರ ಪೈಪೋಟಿ ಎದುರಿಸಬೇಕಾಗಿದೆ" ಎಂದು ಹೇಳಿದರು.

"ಕರ್ನಾಟಕದಲ್ಲಿ ಒಕ್ಕೂಟ ಉತ್ಪಾದಕರಿಂದ ಟೋನ್ಡ್ ಹಾಲನ್ನು ಲೀಟರಿಗೆ ರೂ.35ಕ್ಕೆ ಖರೀದಿಸುತ್ತಿದ್ದು, ನೆರೆಯ ಆಂಧ್ರಪ್ರದೇಶದಲ್ಲಿ ರೂ. 41.5, ಕೇರಳದಲ್ಲಿ ರೂ. 41.8, ಮಹಾರಾಷ್ಟ್ರದಲ್ಲಿ ರೂ. 41, ತಮಿಳುನಾಡಿನಲ್ಲಿ ರೂ. 42.24 ಕ್ಕೆ ಖರೀದಿಸಲಾಗುತ್ತಿದೆ" ಎಂದು ಹೇಳಿದರು.

"ಇದೇ ರೀತಿ ಹಾಲಿನ ಗರಿಷ್ಠ ಮಾರಾಟ ದರದಲ್ಲಿ ಸಹ ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಲೀಟರಿಗೆ ಕನಿಷ್ಠ ರೂ.12 ರಷ್ಟು ಕಡಿಮೆಯಿದೆ" ಎಂದರು.

# ಸುಂಕದಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಸಭೆ : ಹೈನುಗಾರಿಕೆಯಲ್ಲಿ ಗ್ರಾಮೀಣ ಭಾಗದ ಹಾಲು ಉತ್ಪಾದಕರು ಮೇಲುಗೈ ತುಮಕೂರು ಹಾಲು ಒಕ್ಕೂಟ ಸಂಘದ ನಿರ್ದೇಶಕ ಸಿದ್ದಗಂಗಯ್ಯ ಮೆಚ್ಚುಗೆ

**ಮುಸ್ಸಂಜೆ ಸಮಯ,**
ಕೊರಟಗೆರೆ: ಗ್ರಾಮೀಣ ಆರ್ಥಿಕತೆಗೆ ಹೈನುಗಾರಿಕೆ ಪ್ರಮುಖ ಆಧಾರವಾಗಿದ್ದು, ಹಾಲು ಉತ್ಪಾದನೆ ಮತ್ತು ಸಹಕಾರ ಸಂಘಗಳ ಅಭಿವೃದ್ಧಿಯಲ್ಲಿ ರೈತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಸಿದ್ದಗಂಗಯ್ಯ ಹೇಳಿದರು.

ಕೊರಟಗೆರೆ ತಾಲ್ಲೂಕಿನ ಸುಂಕದಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ 2025–26ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಪಿ.ಎನ್. ಕೃಷ್ಣಮೂರ್ತಿ ಉದ್ಘಾಟಿಸಿ ಮಾತನಾಡಿದರು.

ಹೈನುಗಾರಿಕೆ ರೈತ ಕುಟುಂಬಗಳಿಗೆ ವರ್ಷಪೂರ್ತಿ ಆದಾಯ ತಂದುಕೊಡುವ ಲಾಭದಾಯಕ ಉಪಕಸುಬಾಗಿದೆ. ರೈತರು,ಮಹಿಳೆಯರು ಜಾನುವಾರುಗಳ ಆರೈಕೆ, ಗುಣಮಟ್ಟದ ಹಾಲು ಉತ್ಪಾದನೆ ಹಾಗೂ ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಜಾನುವಾರುಗಳಿಗೆ ಸಮತೋಲಿತ ಮೇವು, ನಿಯಮಿತ ಆರೋಗ್ಯ ತಪಾಸಣೆ ಹಾಗೂ ಸ್ವಚ್ಛ ಹಾಲು ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡಿದರೆ ಉತ್ಪಾದನೆ ಮತ್ತು ರೈತರ ಆದಾಯ ಎರಡನ್ನೂ ಹೆಚ್ಚಿಸಬಹುದು ಎಂದು ಅವರು ತಿಳಿಸಿದರು ಈ ರೀತಿಯ ಪ್ರೋತ್ಸಾಹದಿಂದ ಇನ್ನಷ್ಟು ಮಹಿಳೆಯರು ರೈತರು ಹೈನುಗಾರಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಿದ್ದು, ಹಾಲು ಉತ್ಪಾದನೆಯೂ ಹೆಚ್ಚಾಗಲಿದೆ ಎಂದು ಅಭಿಪ್ರಾಯಪಟ್ಟರು.

**ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಪಿ.ಎನ್.ಕೆ. ಯವರಿಗೆ ರಸ್ತೆ ದುರಸ್ತಿ ಬಗ್ಗೆ ಹೇಳಿದರು?**



ಅದಕ್ಕೆ ಅವರು ತಾಲ್ಲೂಕಿನ ಕೆಲವು ಮುಖ್ಯರಸ್ತೆಗಳನ್ನು ಹೊರತುಪಡಿಸಿ ಬಹುತೇಕ ಎಲ್ಲ ರಸ್ತೆಗಳು ಗುಂಡಿಗಳಿಂದ ಕೂಡಿದ್ದು, ಪ್ರಯಾಣಿಕರಿಗೆ ಪ್ರಯಾಣದಲ್ಲಿ ಪ್ರಯಾಸವುಂಟು ಮಾಡುತ್ತಿವೆ. ಅದರಲ್ಲೂ ಗ್ರಾಮೀಣ ಭಾಗದ ರಸ್ತೆಗಳು ಹದಗೆಟ್ಟಿದ್ದು, ಈ ರಸ್ತೆಗಳಲ್ಲಿ ಸಂಚರಿಸುವುದು ದುಸ್ತರವಾಗಿದೆ.

ಸತತ ಮಳೆ, ನಿರ್ವಹಣೆ ಕೊರತೆ ಹಾಗೂ ಭಾರಿ ವಾಹನಗಳ ಓಡಾಟದಿಂದ ರಸ್ತೆಗಳ ತುಂಬ ಗುಂಡಿಗಳು ನಿರ್ಮಾಣವಾಗಿದ್ದು, ವಾಹನ ಸವಾರರಿಗೆ ಮೃತ್ಯುಕೂಪಗಳಾಗಿ ಪರಿಣಮಿಸುತ್ತಿವೆ.

ಗ್ರಾಮೀಣ ಭಾಗದ ಹಳ್ಳಿಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವ ತಾಲ್ಲೂಕಿನ ಹಲವು ರಸ್ತೆಗಳು ನಿರ್ವಹಣೆ ಕೊರತೆಯಿಂದ ಸಂಪೂರ್ಣ ಹಾಳಾಗಿದ್ದು, ಈ ರಸ್ತೆಯಲ್ಲಿ ವಾಹನಗಳಿರಲಿ ರೈತರೂ ಸಹ ತಮ್ಮ ಹೊಲಗಳಿಗೆ ಚಕ್ಕಡಿಗಳಲ್ಲಿ ತೆರಳುವುದು ಅಸಾಧ್ಯವಾಗಿದೆ.

ಇದರ ವಿಚಾರವಾಗಿ ಸರ್ಕಾರಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದು, ಗ್ರಾಮ ಪಂಚಾಯಿತಿ ಮತ್ತು ಪಿ ಡಬ್ಲ್ಯೂ ಡಿ ಇಲಾಖೆಯು ಇತ್ತ ಗಮನ ಹರಿಸಿಲ್ಲ .ಇದರ ವಿಚಾರವಾಗಿ ಡಿಸಿಎಂ,ನಮ್ಮ ಶಾಸಕರಾದ ಡಾ.ಜಿ ಪರಮೇಶ್ವರ್ ರವರ ಹತ್ತಿರ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿ ವಿಚಾರವಾಗಿ ಮಾತನಾಡುತ್ತೇನೆ ಎಂದು ತಿಳಿಸಿದರು. ಸಂದರ್ಭದಲ್ಲಿ ಸುಂಕದಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

–ಮೆಡಿಕಲ್ ಕುಮಾರ್
ಸಂಕೇನಹಳ್ಳಿ

# ಕುಡಿಯಲು ನೀರಿಲ್ಲದೆ ಪರದಾಟ, ಪಂಚಾಯಿತಿ ಮೌನ ಏಕೆ?

**ಮುಸ್ಸಂಜೆ ಸಮಯ,**
ಯಳಂದೂರು: ತಾಲ್ಲೂಕಿನ ಹೊನ್ನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಲಿಂಗಾಯತರ ಬೀದಿ ಮತ್ತು ಉಪ್ಪಾರ ಬೀದಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿರುವ ಮನೆ ಮನೆಗೆ ಕುಡಿಯುವ ನೀರು ಸರಿಯಾಗಿ ಬರುತ್ತಿಲ್ಲ.

ನೀರು ಸರಬರಾಜು ಮಾಡುವ ಪೈಪ್ ಲೈನ್ ಅಲ್ಲಲ್ಲಿ ಒಡೆದು ಸಂಪೂರ್ಣ ಹದಗೆಟ್ಟಿದ್ದು, ಪ್ರತಿ ನಿತ್ಯ ನೀರು ರಸ್ತೆಯಲ್ಲೇ ಪೋಲಾಗುತ್ತಿದೆ. ಆದ್ದರಿಂದ ನಿವಾಸಿಗಳು ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ. ಈ ಕುರಿತು ಗ್ರಾಮ ಪಂಚಾಯಿತಿ



ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಜಲಜೀವನ್ ಅಧಿಕಾರಿಗಳಿಗೆ ಹಲವು ಬಾರಿ ಮೌಖಿಕವಾಗಿ ದೂರು ನೀಡಿದರೂ, ಸಂಬಂಧಪಟ್ಟ ಅಧಿಕಾರಿಗಳು ತಲೆಕೆಡಿಸಿಕೊಳ್ಳದೆ ನಿರ್ಲಕ್ಷ್ಯ ತೋರುತ್ತಿರುವುದು ಖಂಡನೀಯವಾಗಿದೆ.ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಹಾಳಾಗಿರುವ ಪೈಪ್ ಲೈನ್ ದುರಸ್ತಿ ಮಾಡಿಸಿ,ನಿಯಮಿತವಾಗಿ ಕುಡಿಯುವ ನೀರು ಸರಬರಾಜು ಮಾಡಬೇಕೆಂದು ಲಿಂಗಾಯತರ ಬೀದಿ ಮತ್ತು ಉಪ್ಪಾರ ಬೀದಿ ನಿವಾಸಿಗಳು ಪಂಚಾಯಿತಿಗೆ ಮನವಿ ಸಲ್ಲಿಸಿದ್ದಾರೆ.

–ಗುರುರಾಜ್ ಚಾಮರಾಜನಗರ

## ರಾಜ್ಯದ ಜನತೆಗೆ ಬಿಗ್ ಶಾಕ್ : ತೀವ್ರ ಬರಗಾಲ ಹಿನ್ನೆಲೆ, ಈರುಳ್ಳಿ, ಟೊಮೇಟೊ ಸೇರಿ ತರಕಾರಿ ಬೆಲೆ ಗಗನಕ್ಕೇರಿಕೆ!

**ಮುಸ್ಸಂಜೆ ಸಮಯ,** ಬೆಂಗಳೂರು: ರಾಜ್ಯದಲ್ಲಿ ಈ ಬಾರಿ ಮಳೆ ಕೊರತೆಯಾಗಿ ಬರ ಆವರಿಸಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ದಿನನಿತ್ಯದ ಜೀವನದ ಮೇಲೆ ತೀವ್ರ ಪೆಟ್ಟು ಬಿದ್ದಿದೆ. ಮಳೆ ಇಲ್ಲದೆ ಬೆಳೆಗಳು ನಾಶವಾಗಿ ಫಸಲು ರೈತನ ಕೈ ಸೇರದಿರುವುದು ಹಾಗೂ ಹಲವೆಡೆ ಕೃಷಿ ಚಟುವಟಿಕೆಗಳೇ ನಡೆಯದಿರುವುದು ಇಂದಿನ ಅಗತ್ಯ ವಸ್ತುಗಳ ಅಭಾವಕ್ಕೆ ಮುಖ್ಯ ಕಾರಣವಾಗಿದೆ. ಇದರ ನೇರ ಪರಿಣಾಮವಾಗಿ ಮಾರುಕಟ್ಟೆಯಲ್ಲಿ ತರಕಾರಿ ಸೇರಿದಂತೆ ದಿನಬಳಕೆಯ ವಸ್ತುಗಳ ದರ ನಿರಂತರವಾಗಿ ಏರಿಕೆಯಾಗುತ್ತಿದ್ದು, ಜನಸಾಮಾನ್ಯರ ಜೇಬಿಗೆ ದೊಡ್ಡ ಮಟ್ಟದ ಹೊರೆಯಾಗುತ್ತಿದೆ. ಸಾಮಾನ್ಯವಾಗಿ ಪ್ರತಿ ವರ್ಷ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಹೊಸ ಬೆಳೆ ಮಾರುಕಟ್ಟೆಗೆ ಲಗ್ಗೆ ಇಡುತ್ತಿದ್ದರಿಂದ ತರಕಾರಿ ದರ ಕಡಿಮೆಯಾಗಿ ಜನರಿಗೆ ಕೈಗೆಟುಕುವ ದರದಲ್ಲಿ ಸಿಗುತ್ತಿತ್ತು. ಆದರೆ ಈ ಬಾರಿ ಪರಿಸ್ಥಿತಿ ತದ್ವಿರುದ್ಧವಾಗಿದ್ದು, ಸೆಪ್ಟೆಂಬರ್‌ನಲ್ಲೇ ದರಗಳು ಗಗನಕ್ಕೇರುತ್ತಿವೆ. ಸದ್ಯ ಪ್ರತಿ ಕೆ.ಜಿ.ಗೆ ಬೆಳ್ಳುಳ್ಳಿ ದರ ಬರೋಬ್ಬರಿ 300 ರೂ. ದಾಟಿದ್ದರೆ, ಈರುಳ್ಳಿ 78 ರೂ., ನುಗ್ಗೆಕಾಯಿ ಹಾಗೂ ನಾಟಿ ಕ್ಯಾರೆಟ್ 70 ರೂ.ವರೆಗೆ ಮಾರಾಟವಾಗುತ್ತಿವೆ. ಇನ್ನು ಸೌತೆಕಾಯಿ (48–60 ರೂ.), ಮಂಗಳೂರು ಸೌತೆಕಾಯಿ (64 ರೂ.), ಬೀಟ್‌ರೂಟ್ (50 ರೂ.) ಹಾಗೂ ಆಲೂಗೆಡ್ಡೆ (46–50 ರೂ.) ದರವೂ ಹೆಚ್ಚಾಗಿದೆ. ಕಳೆದ ಕೆಲವು ದಿನಗಳಿಂದ ರಾಜ್ಯದ ಕೆಲವೆಡೆ ಬೀಳುತ್ತಿರುವ ಮಳೆ ಮುಂದೆಯೂ ಮುಂದುವರಿದರೆ ಮಾತ್ರ ದರ ಇಳಿಕೆಯಾಗಬಹುದು ಎಂಬುದು ವ್ಯಾಪಾರಿಗಳ ಆಶಯವಾಗಿದೆ.



# ಶ್ರೀ ವಿಶ್ವಕರ್ಮ ಜಯಂತಿಯ ಅಂಗವಾಗಿ ಶಿಲ್ಪಕಲೆಯ ಶ್ರೀಮಂತಿಕೆಗೆ ವಿಶ್ವಕರ್ಮರ ಕೊಡುಗೆ ಅಪಾರ : ಪಿ.ಸುಜ್ಞಾನಮೂರ್ತಿ

ಮುಸ್ಸಂಜೆ ಸಮಯ,
ಕೊಪ್ಪಳ: ಶಿಲ್ಪಕಲೆಯ ಶ್ರೀಮಂತಿಕೆಗೆ ವಿಶ್ವಕರ್ಮರ ಕೊಡುಗೆ ಅಪಾರವಾಗಿದೆ ಎಂದು ಕರ್ನಾಟಕ ರಾಜ್ಯದ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷರಾದ ಪಿ.ಸುಜ್ಞಾನಮೂರ್ತಿ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಾಹಿತ್ಯ ಭವನದಲ್ಲಿ ಸೋಮವಾರ (ಸೆ.21ರಂದು) ಆಯೋಜಿಸಲಾಗಿದ್ದ ಶ್ರೀ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು. ವಿಶ್ವಕರ್ಮ ಸಮುದಾಯದ ಯುವಜನರು ಕೇವಲ ಸಾಂಪ್ರದಾಯಿಕ ಕುಲಕಸುಬಿಗೆ ಸೀಮಿತವಾಗದೆ ಆಧುನಿಕ ತಂತ್ರಜ್ಞಾನ, ಸಿಎನ್‌ಸಿ ಮಷಿನ್‌ಗಳು, ಡಿಜಿಟಲ್ ಹಾಗೂ ತಾಂತ್ರಿಕ ಕೌಶಲ್ಯಗಳನ್ನು ಅಳವಡಿಸಿಕೊಂಡು ಉದ್ಯಮಿಗಳಾಗಿ ಬೆಳೆಯಬೇಕು.

ವಿಶ್ವಕರ್ಮ ಅಭಿವೃದ್ಧಿ ನಿಗಮದ ವತಿಯಿಂದ ಸಮುದಾಯದ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ನೇರ ಸಾಲ ಯೋಜನೆ ಅಡಿಯಲ್ಲಿ ಸಬ್ಸಿಡಿ ಸೌಲಭ್ಯಗಳು ಲಭ್ಯವಿವೆ. ಅರಿವು ಯೋಜನೆಯಡಿ ಸಿಇಟಿ ಹಾಗೂ ನೀಟ್ ಮೂಲಕ ಉನ್ನತ ಶಿಕ್ಷಣ ಇಂಜಿನಿಯರಿಂಗ್, ವೈದ್ಯಕೀಯ ಇತ್ಯಾದಿ ವ್ಯಾಸಂಗಕ್ಕೆ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.1 ಲಕ್ಷ ರೂಪಾಯಿಗಳವರೆಗೆ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ.ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ಎಂಎಸ್/ಮಾಸ್ಟರ್ಸ್ ಮಾಡಲು ಇಚ್ಛಿಸುವ ಸಮುದಾಯದ ವಿದ್ಯಾರ್ಥಿಗಳಿಗೆ ರೂ. 50 ಲಕ್ಷದವರೆಗೆ ಬಡ್ಡಿ ರಹಿತ ಸಾಲ ಸೌಲಭ್ಯವಿದೆ.

ಸುವರ್ಣ ಮಹೋತ್ಸವ ವಿದ್ಯಾರ್ಥಿವೇತನ ಯೋಜನೆಯಡಿ ಐಟಿಐ, ಜೆಟಿಟಿಸಿ ಹಾಗೂ ವುಡ್ ಟೆಕ್ನಾಲಜಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ರೂ. 15,000 ವಿದ್ಯಾರ್ಥಿವೇತನ ನೀಡಲಾಗುತ್ತಿದೆ ಎಂದರು.

ಗಂಗಾ ಕಲ್ಯಾಣ, ಸಾರಥಿ ಯೋಜನೆ ಹಾಗೂ ಕೇಂದ್ರ/ರಾಜ್ಯ ಸರ್ಕಾರದ ಪಿಎಂಇಜಿಪಿ, ಮುದ್ರಾ ಯೋಜನೆಗಳಡಿ ಸ್ವಂತ ಉದ್ಯಮ ಸ್ಥಾಪಿಸಲು ಸಿಎನ್‌ಸಿ, ಲೇಸರ್ ಯಂತ್ರೋಪಕರಣಗಳ ಬಳಕೆಗೆ ಬ್ಯಾಂಕ್‌ಗಳ ಮೂಲಕ ಆರ್ಥಿಕ ನೆರವು ಕಲ್ಪಿಸಲಾಗುವುದು. ನಿಗಮದ ಪ್ರಮುಖ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30 ಕೊನೆಯ




ದಿನಾಂಕವಾಗಿದ್ದು, ಗ್ರಾಮ ಒನ್ ಅಥವಾ ಕರ್ನಾಟಕ ಒನ್ ಕೇಂದ್ರಗಳ ಮೂಲಕ ಸಾರ್ವಜನಿಕರು ಅರ್ಜಿ ಸಲ್ಲಿಸಿ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು. ಕೊಪ್ಪಳ ಸಹಾಯಕ ಆಯುಕ್ತರಾದ ಮಹೇಬೂಬ್ ಜೀಲಾನ್ ಖುರೇಶಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಾಜಕ್ಕೆ ವಿಶ್ವಕರ್ಮ ಸಮುದಾಯದ ಕೊಡುಗೆ ಅನನ್ಯವಾಗಿದೆ. ಸಮಾಜದ ಶಾಂತಿ, ಸೌಹಾರ್ದತೆ ಮತ್ತು ಪ್ರತಿಯೊಬ್ಬರ ಏಳಿಗೆಗಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಹೇಳಿದರು. ಕುಷ್ಟಗಿಯ ಶರಣ ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷರಾದ ನಟರಾಜ ಸೋನಾರ್ ಅವರು ವಿಶೇಷ ಉಪನ್ಯಾಸ ನೀಡಿ,ವಿಶ್ವಕರ್ಮರು ಜಗತ್ತಿನ ಸೃಷ್ಟಿಕರ್ತರಾಗಿದ್ದು, ಪುರಾಣ–ಇತಿಹಾಸಗಳಲ್ಲಿ ದೇವಾಲಯಗಳು, ಆಯುಧಗಳು, ವಿಮಾನಗಳು ಹಾಗೂ ಮಹಾನಗರಗಳನ್ನು ನಿರ್ಮಿಸಿದ ಶಿಲ್ಪಿಯಾಗಿದ್ದಾರೆ. ಅಜಂತಾ, ಎಲ್ಲೋರಾ, ಹಂಪಿ, ಬೇಲೂರು, ಹಳೆಬೀಡು ಮೊದಲಾದ ಐತಿಹಾಸಿಕ ತಾಣಗಳ ನಿರ್ಮಾಣದ ಹಿಂದೆ ವಿಶ್ವಕರ್ಮರ ಶ್ರಮವಿದೆ.

ವಿಶ್ವಕರ್ಮ ಸಮುದಾಯವು ಪ್ರಾಚೀನ ಕಾಲದಿಂದಲೂ ಗುಣಮಟ್ಟ ಮತ್ತು ಕೌಶಲ್ಯಕ್ಕೆ ಹೆಸರಾಗಿದೆ. ಇಂದು ಸಮಾಜವು ಆಧುನಿಕತೆಗೆ ತೆರೆದುಕೊಂಡಿದ್ದರೂ ವಿಶ್ವಕರ್ಮರು ರೂಪಿಸಿದ ಕಲೆ ಮತ್ತು ವಿನ್ಯಾಸಗಳು ಇಂದಿಗೂ ಮಾದರಿಯಾಗಿವೆ ಎಂದು ವಿವರವಾಗಿ ಮಾತನಾಡಿದರು.ಕಾರ್ಯಕ್ರಮ ಸಾನಿಧ್ಯ ವಹಿಸಿದ್ದ ಶ್ರೀ ಸುಬ್ರಹ್ಮಣ್ಯ ಆಚಾರ್ಯರು ಮತ್ತು ಅಭಿನವ ಶ್ರೀಕಂಠ ಸ್ವಾಮಿಗಳು ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮಾಜದ ಕೊಪ್ಪಳ ಜಿಲ್ಲಾಧ್ಯಕ್ಷರಾದ ನಾಗೇಶಕುಮಾರ ಕಂಸಾಳೆ,ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಕರಿಯಪ್ಪ, ತಾಲ್ಲೂಕಾಧಿಕಾರಿ ಪ್ರಭು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕರ್ಣಕುಮಾರ ಸೇರಿದಂತೆ ಹಲವು ಮುಖಂಡರು, ಮಹಿಳೆಯರು, ಯುವಕರು ಉಪಸ್ಥಿತರಿದ್ದರು.

ಶ್ರೀಶೈಲ ಪತ್ತಾರ ಹಾಗೂ ತಂಡದವರು ವಂದೇ ಮಾತರಂ ಗೀತೆ, ನಾಡಗೀತೆ ಹಾಗೂ ವಿವಿಧ ಸಂಗೀತ ಗಾಯನಗಳನ್ನು ಪ್ರಸ್ತುತ ಪಡಿಸಿದರು. ಹನುಮಂತಪ್ಪ ಕುರಿ ಅವರು ಕಾರ್ಯಕ್ರಮ ನಿರೂಪಿಸಿದರು.

**ಮೆರವಣಿಗೆ:**
ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಶ್ರೀ ವಿಶ್ವಕರ್ಮರ ಭಾವಚಿತ್ರದ ಮೆರವಣಿಗೆಯೂ ಶ್ರೀ ಸಿರಸಪ್ಪಯ್ಯನ ಮಠದಿಂದ ಪ್ರಾರಂಭಗೊಂಡು ಗಡಿಯಾರ ಕಂಬ,ಜವಾಹರ ರಸ್ತೆಯ ಮೂಲಕ ಸಾಹಿತ್ಯ ಭವನದವರೆಗೆ ಅದ್ದೂರಿಯಾಗಿ ಜರುಗಿತು.

–ಸುಬ್ರಮಣ್ಯ ಮೈಸೂರು

# ದಾಸರಹಳ್ಳಿ ಕಸಾಪ ವತಿಯಿಂದ ವಿಶೇಷ ಸಾಹಿತ್ಯ ಸಮ್ಮೇಳನ ಆಯೋಜನೆ ಮಾನವ ಜೀವನದ ಪರಿವರ್ತನೆಯೇ ಸಾಹಿತ್ಯದ ಮೂಲ ಆಶಯ – ಮಣ್ಣೆ ಮೋಹನ್

**ಮುಸ್ಸಂಜೆ ಸಮಯ,**
ಬೆಂಗಳೂರು: ಎಂಟನೇ ಮೈಲಿಯ ಸರ್ಕಲ್ ನಲ್ಲಿ ರಾಷ್ಟ್ರಕವಿ ಕುವೆಂಪು ಮತ್ತು ವರಕವಿ ಬೇಂದ್ರೆಯವರ ಪ್ರತಿಮೆಯನ್ನು ನಿಲ್ಲಿಸಬೇಕೆಂಬುದು ನನ್ನ ಮಹದಾಸೆ. ಏಕೆಂದರೆ ಈ ಭಾಗ ಬೆಂಗಳೂರಿನ ಹೆಬ್ಬಾಗಿಲಾಗಿದೆ. ಬೆಂಗಳೂರಿಗೆ ಬರುವ ಪ್ರತಿಶತ 80ರಷ್ಟು ಜನರು ಇಲ್ಲಿಂದಲೇ ಬೆಂಗಳೂರನ್ನು ತಲುಪುತ್ತಾರೆ. ಅಂತಹ ಆಯಕಟ್ಟಿನ ಸ್ಥಳದಲ್ಲಿ, ಅಂತಹ ಮಹಾನ್ ವ್ಯಕ್ತಿಗಳ ಪ್ರತಿಮೆಯ ಸ್ಥಾಪನೆಯ ಮೂಲಕ ಸಾಹಿತ್ಯದ ಕಂಪನ್ನು ಪಸರಿಸಬೇಕು ಎಂದು ವೈ ಬಿ ಎಚ್ ಜಯರಾಜ್ ರವರು ನುಡಿದರು. ಅವರು ದಾಸರಹಳ್ಳಿ ಕಸಾಪ ವತಿಯಿಂದ ಬಾಗಲಗುಂಟೆಯ ಮಾರಮ್ಮ ದೇವಾಲಯದ ಆವರಣದಲ್ಲಿರುವ ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ ವಿಶೇಷ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ಅಲಂಕರಿಸಿ ಮಾತನಾಡಿದರು.

2000 ವರ್ಷಗಳ ಭವ್ಯ ಇತಿಹಾಸವಿರುವ ಕನ್ನಡ ಸಾಹಿತ್ಯದ ತೇರನ್ನು ಲಿಂಗರಾಜು ಕಾಳೇನಹಳ್ಳಿ ಮೇಷ್ಟ್ರು, ದಾಸರಹಳ್ಳಿ ಕ್ಷೇತ್ರದಾದ್ಯಂತ ಮತ್ತು ಮಣ್ಣೆ ಮೋಹನ್ ರವರು ರಾಜ್ಯಾದ್ಯಂತ ಎಳೆಯುತ್ತಿದ್ದಾರೆ. ಅವರಿಗೆ ಅಭಿನಂದನೆಗಳು. ಇಂತಹ ಇನ್ನಷ್ಟು ಸಾಹಿತ್ಯದ ಕಾರ್ಯಕ್ರಮಗಳ ಮೂಲಕ ನಾಡಿನಾದ್ಯಂತ ಸಾಹಿತ್ಯದ ಸೌರಭವನ್ನು ಹರಡೋಣ. ಮುಂದಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಾನು ಸ್ಪರ್ಧಿ. ಎಲ್ಲರೂ ನನ್ನನ್ನು ಬೆಂಬಲಿಸಿ ಎಂದು ನಿವೃತ್ತ ಐ ಎ ಎಸ್ ಅಧಿಕಾರಿ ಸಿ ಸೋಮಶೇಖರ್ ನುಡಿದರು.

ಕಳೆದ ಐದು ವರ್ಷಗಳಲ್ಲಿ ಇಡೀ ರಾಜ್ಯದಲ್ಲಿ ಮಾತ್ರವಲ್ಲದೆ, ಇಡೀ ರಾಷ್ಟ್ರದಲ್ಲಿ ಯಾವುದೇ ಭಾಷೆಯ ಸಾಹಿತ್ಯ ಪರಿಷತ್ತು ಮಾಡದ ಕೆಲಸವನ್ನು ದಾಸರಹಳ್ಳಿ ಕನ್ನಡ ಸಾಹಿತ್ಯ ಪರಿಷತ್ತು ಮಾಡಿದೆ. ದಿನಕ್ಕೊಂದು ಶಾಲೆಯಲ್ಲಿ ನಿರಂತರವಾಗಿ 100 ದಿನಗಳ ಸಾಹಿತ್ಯ ಕಾರ್ಯಕ್ರಮದ ಮೂಲಕ ಮತ್ತು ಕೇವಲ 28 ದಿನಗಳಲ್ಲಿ ನೂರಕ್ಕೂ ಹೆಚ್ಚು ಮನೆಗಳಲ್ಲಿ ಮನೆಗೊಂದು ಗ್ರಂಥಾಲಯ ಅಭಿಯಾನದ ಮೂಲಕ ಗಿನ್ನಿಸ್ ರೆಕಾರ್ಡ್ ನಲ್ಲಿ ನಮ್ಮ ಸಾಧನೆ ದಾಖಲಾಗಿದೆ. ಇದಕ್ಕಾಗಿ ಇಡೀ ಕ್ಷೇತ್ರದ ಜನತೆಗೆ ಧನ್ಯವಾದಗಳು ಎಂದು ಪ್ರಾಸ್ತಾವಿಕ ನುಡಿಗಳನ್ನಾಡಿದ ದಾಸರಹಳ್ಳಿ ಕಸಾಪ ಅಧ್ಯಕ್ಷ ಲಿಂಗರಾಜು ಕಾಳೇನಹಳ್ಳಿ ಮೇಷ್ಟ್ರು ತಿಳಿಸಿದರು.

"ಸಾಹಿತ್ಯದಿಂದ ಮಾನವ ಜೀವನದ ಪರಿವರ್ತನೆ" ವಿಚಾರಗೋಷ್ಠಿಯಲ್ಲಿ




ಮಾತನಾಡಿದ ಲೇಖಕ ಚಿಂತಕ ಮಣ್ಣೆ ಮೋಹನ್ ರವರು, ಸುಮಾರು 5,000 ವರ್ಷಗಳ ಹಿಂದಿನ ವೈದಿಕ ಸಾಹಿತ್ಯ, ರಾಮಾಯಣ, ಮಹಾಭಾರತ, ಭಗವದ್ಗೀತೆ ಮತ್ತು ಹಿಂದೂ ಪುರಾಣಗಳು ಇಲ್ಲಿಯವರೆಗೂ ಇಡೀ ಭಾರತೀಯರೆಲ್ಲರ ಜೀವನವನ್ನು ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ನೈತಿಕವಾಗಿ, ತಾತ್ವಿಕವಾಗಿ ಪರಿವರ್ತನೆಗೊಳಿಸಿವೆ. ಸಾವಿರ ವರ್ಷಗಳ ಹಿಂದಿನ ಪಂಪ, ರನ್ನ, ಆನಂತರದ ವಚನ ಸಾಹಿತ್ಯ, ಕುಮಾರವ್ಯಾಸ ಭಾರತ, ದಾಸ ಸಾಹಿತ್ಯ, ಸರ್ವಜ್ಞನ ತ್ರಿಪದಿಗಳು, ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ, ಮಹಿಳಾ ಸಾಹಿತ್ಯಗಳೆಲ್ಲವೂ ಇಡೀ ಸಮಾಜವನ್ನು ಪರಿವರ್ತನೆಗೊಳಿಸುವಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸಿವೆ. ಇಂತಹ ಹಿನ್ನೆಲೆಯ ನಾವುಗಳು ಸಾಹಿತ್ಯ ಕ್ಷೇತ್ರದಲ್ಲಿ ವಿಭಿನ್ನ, ವಿಶಿಷ್ಟ, ವಿನೂತನ ಸಾಧನೆಗೈಯಬೇಕೆಂದು, ಆ ಹಾದಿಯಲ್ಲಿ ಲಿಂಗರಾಜು ಕಾಳೇನಹಳ್ಳಿ ಮೇಷ್ಟ್ರು ಮತ್ತು ಜ್ಞಾನ ಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗ ನಡೆಯುತ್ತಿವೆ ಎಂದು ತಿಳಿಸಿದರು.

ಮಣ್ಣೆ ಮೋಹನ್ ಪುಸ್ತಕ ಮಾಲೆ ಮತ್ತು ಪರಿಮಳ ಪ್ರಕಾಶನದ ವತಿಯಿಂದ ಪ್ರಕಟಿಸಿರುವ, ಲಿಂಗರಾಜು ಕಾಳೇನಳ್ಳಿ ಮೇಷ್ಟ್ರು ವಿರಚಿತ 'ನೆಳಬು' ಕವನ ಸಂಕಲನವನ್ನು ಲೋಕಾರ್ಪಣೆಗೊಳಿಸಲಾಯಿತು. ದಾಸರಹಳ್ಳಿ ಕಸಾಪ ಸಾಧನೆಗಾಗಿ ನೀಡಲಾಗಿರುವ 2 ಗಿನ್ನಿಸ್ ರೆಕಾರ್ಡ್ ದಾಖಲೆಯ ಪರಿತೋಷಕಗಳನ್ನು ಅನಾವರಣಗೊಳಿಸಲಾಯಿತು.

ಕಂನಾಡಿಗ ನಾರಾಯಣ್, ಡಾ ಟಿ ಗೋವಿಂದರಾಜು, ಚಿಕ್ಕ ಹೆಜ್ಜಾಜಿ ಮಹಾದೇವ್, ರತ್ನ ಕಾಳೇಗೌಡ ಮತ್ತಿತರರು ಮಾತನಾಡಿದರು. ಗೀತಾ ವಿ ಆರ್ ಮತ್ತು ತೇಜು ರತ್ನರವರ ನಿರೂಪಣೆ ಎಲ್ಲರ ಮನ ಸೆಳೆಯಿತು.ನಾಗರಾಜು ಜಿ ನಾಗಸಂದ್ರ,ಸಿರಿಗಂಧ ರಾಮಕೃಷ್ಣಪ್ಪ, ಲತಾ ಕುಂದರಗಿ, ಡಾ ಟಿ ರಂಗನಾಥ್, ಮಮತಾ ವಾರನಹಳ್ಳಿ, ವಿ ಟಿ ರಾಮಕೃಷ್ಣಯ್ಯ ಮೊದಲಾದವರು ಉಪಸ್ಥಿತರಿದ್ದರು. ಟಿ ಸೋಮಶೇಖರ್, ಆನಂದ ವಿ ತಿರುಮಲ, ಅನುಪಮಾ ಚಂದ್ರು, ಚೇತನ ಹಿರೇಮಠ, ಗುರುಪ್ರಸಾದ್ ಎಲ್, ರಕ್ಷಿತಾ ವಸಂತ,ರತ್ನ ತುಮಕೂರು, ಹೂವಿಗಣ್ಣ ರಾಜು, ಮಂಜುನಾಥ್ ಪಿ ಎಲ್, ಮುಕ್ತಾ ಷೈ, ಇಂದು– ಸೇರಿದಂತೆ ಸುಮಾರು 70 ಕ್ಕೂ ಹೆಚ್ಚು ಕವಿಗಳು ಕವನವಾಚನ ಮಾಡಿದರು. ತುಮಕೂರು ರಸ್ತೆಯ ಎಂಟನೇ ಮೈಲಿಯಿಂದ ಮಾರಮ್ಮ ದೇವಾಲಯದವರೆಗೆ ಬೆಳ್ಳಿರಥದಲ್ಲಿ ವಿವಿಧ ಸಾಂಸ್ಕೃತಿಕ ತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರನ್ನು ಕರೆತರಲಾಯಿತು. ಕಲ್ಪವೃಕ್ಷ ಕವಿಗೋಷ್ಠಿಯ ಸವಿನೆನಪಿಗಾಗಿ ಎಲ್ಲರಿಗೂ ಸನ್ಮಾನದೊಂದಿಗೆ ಒಂದೊಂದು ಎಳನೀರನ್ನು ನೀಡಿದ್ದು ವಿಶೇಷವೆನಿಸಿತು.

# ಸಚಿವರ ವಿವಾದಗಳಿಂದ ಸರ್ಕಾರಕ್ಕೆ ಮುಜುಗರ: ಮತ್ತೊಬ್ಬ ಸಚಿವರ ವಿರುದ್ಧ ಲೋಕಾಯುಕ್ತರಿಗೆ ದೂರು

**ಮುಸ್ಸಂಜೆ ಸಮಯ,**
ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಸಚಿವರ ಸುತ್ತ ವಿವಾದಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಸರ್ಕಾರದ ವರ್ಚಸ್ಸಿಗೆ ಮುಜುಗರ ಉಂಟಾಗುತ್ತಿದೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಆರಂಭವಾಗಿದೆ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ವಿರುದ್ಧ ಜಾರಿ ನಿರ್ದೇಶನಾಲಯದ ದಾಳಿ ಬಳಿಕ, ಗುತ್ತಿಗೆ ವಿಚಾರದಲ್ಲಿ ಲಂಚ ಪಡೆದ ಆರೋಪಗಳನ್ನು ಇಡಿ ಅಧಿಕಾರಿಗಳು ಮಾಡಿದ್ದಾರೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಕೆಪಿಎಸ್‌ಸಿ ನೇಮಕಾತಿ ವಿಚಾರದಲ್ಲಿ ನಿಯಮ ಉಲ್ಲಂಘನೆಯ ಆರೋಪಗಳನ್ನು ಪ್ರತಿಪಕ್ಷಗಳು ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಅವರ ರಾಜೀನಾಮೆಗೆ ಪ್ರತಿಪಕ್ಷಗಳು ಒತ್ತಾಯಿಸುತ್ತಿವೆ.ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಪ್ರಕರಣದ ಹಿನ್ನೆಲೆಯಲ್ಲಿ ಬಿ. ನಾಗೇಂದ್ರ ಅವರು ಈಗಾಗಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಸರ್ಕಾರಕ್ಕೆ ಮತ್ತೊಂದು ಮುಜುಗರದ ಸಂಗತಿಯಾಗಿದೆ.

ಇದೇ ವೇಳೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಹಣದ ದುರುಪಯೋಗದ ಆರೋಪಗಳೂ ಸರ್ಕಾರಕ್ಕೆ ತಲೆಬಿಸಿಯಾಗಿದೆ.ಈ ಎಲ್ಲ ಬೆಳವಣಿಗೆಗಳ ನಡುವೆಯೇ ಅಬಕಾರಿ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರ ಹೇಳಿಕೆ ಹೊಸ ವಿವಾದಕ್ಕೆ ಕಾರಣವಾಗಿದೆ.

ತಹಸೀಲ್ದಾರ್ ಕಚೇರಿ ಆವರಣದಲ್ಲಿ ನಡೆದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಅಧಿಕಾರಿಗಳು ಕೆಲಸ ಮಾಡಿಕೊಟ್ಟಾಗ ಜನರು ತಮ ಮನಸ್ಸಿಗೆ ಅನುಕೂಲವಾಗುವ ರೀತಿಯಲ್ಲಿ ಕೃತಜ್ಞತೆ ಸಲ್ಲಿಸಬಹುದು. ಆದರೆ ಅಧಿಕಾರಿಗಳು ಬಲವಂತವಾಗಿ ಹಣ ಪಡೆಯಬಾರದು



ಎಂದು ಹೇಳಿದ್ದರು.

ಸಚಿವರ ಈ ಹೇಳಿಕೆಯನ್ನು ಭ್ರಷ್ಟಾಚಾರಕ್ಕೆ ಪರೋಕ್ಷವಾಗಿ ಪ್ರೋತ್ಸಾಹ ನೀಡುವ ರೀತಿಯ ಹೇಳಿಕೆ ಎಂದು ಟೀಕಿಸಲಾಗಿದೆ. ಈ ಸಂಬಂಧ ಮೈಸೂರಿನ ವಾಯ್ ಆಫ್ ಪೀಪಲ್‌ಸಂಸ್ಥೆಯ ಮುಖ್ಯಸ್ಥ ವಸಂತರಾವ್ ಚೌಹಾಣ್ ಅವರು ಲೋಕಾಯುಕ್ತರಿಗೆ ದೂರು ನೀಡಿದ್ದಾರೆ. ಭ್ರಷ್ಟಾಚಾರಕ್ಕೆ ಉತ್ತೇಜನ ನೀಡುವ ರೀತಿಯಲ್ಲಿ ಹೇಳಿಕೆ ನೀಡಿರುವ ಸಚಿವರು ಸಂಪುಟದಲ್ಲಿ ಮುಂದುವರಿಯಲು ಅರ್ಹರಲ್ಲ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈಗಾಗಲೇ ಹಲವು ವಿಚಾರಗಳಲ್ಲಿ ಸಚಿವರ ವಿರುದ್ಧ ಆರೋಪಗಳು ಕೇಳಿಬರುತ್ತಿರುವ ಸಂದರ್ಭದಲ್ಲಿ ಶಿವಲಿಂಗೇಗೌಡ ಅವರ ಹೇಳಿಕೆ ಪ್ರತಿಪಕ್ಷಗಳಿಗೆ ಮತ್ತೊಂದು ಅಸ್ತ್ರವಾಗುವ ಸಾಧ್ಯತೆ ಇದೆ. ನಾಗೇಂದ್ರ ಅವರ ಮಾದರಿಯಲ್ಲಿ ಇನ್ನೂ ಇಬ್ಬರು ಸಚಿವರ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂಬ ಚರ್ಚೆಯ ನಡುವೆಯೇ ಮತ್ತಷ್ಟು ಸಚಿವರ ಹೆಸರುಗಳು ವಿವಾದಗಳೊಂದಿಗೆ ಕೇಳಿಬರುತ್ತಿವೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭ್ರಷ್ಟಾಚಾರಕ್ಕೆ ಯಾವುದೇ ಅವಕಾಶವಿಲ್ಲ, ಸ್ವಚ್ಛ ಆಡಳಿತವೇ ಸರ್ಕಾರದ ಆದ್ಯತೆ ಎಂದು ಹಲವು ಬಾರಿ ಹೇಳಿಕೆ ನೀಡಿದ್ದಾರೆ. ಅಧಿಕಾರಿಗಳು ಲಂಚ ಕೇಳಿದರೆ ತಮ ಗಮನಕ್ಕೆ ತರುವಂತೆ ಸಾರ್ವಜನಿಕವಾಗಿ ಮನವಿ ಕೂಡ ಮಾಡಿದ್ದಾರೆ. ಆದರೆ ಇಅದೇ ಸರ್ಕಾರದ ಸಚಿವರೊಬ್ಬರು ಅಧಿಕಾರಿಗಳು ಕೆಲಸ ಮಾಡಿಕೊಟ್ಟ ನಂತರ ಕೃತಜ್ಞತೆ ಸಲ್ಲಿಸುವ ಕುರಿತು ನೀಡಿರುವ ಹೇಳಿಕೆ ಇದೀಗ ರಾಜಕೀಯ ಮತ್ತು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಸಚಿವರ ಸುತ್ತ ವಿವಾದಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಸರ್ಕಾರದ ವರ್ಚಸ್ಸಿಗೆ ಮುಜುಗರ ಉಂಟಾಗುತ್ತಿದೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಆರಂಭವಾಗಿದೆ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ವಿರುದ್ಧ ಜಾರಿ ನಿರ್ದೇಶನಾಲಯದ ದಾಳಿ ಬಳಿಕ, ಗುತ್ತಿಗೆ ವಿಚಾರದಲ್ಲಿ ಲಂಚ ಪಡೆದ ಆರೋಪಗಳನ್ನು ಇಡಿ ಅಧಿಕಾರಿಗಳು ಮಾಡಿದ್ದಾರೆ.

ಮುಸ್ಸಂಜೆ ಸಮಯ
23 ಬುಧವಾರ ಸೆಪ್ಟೆಂಬರ್ 2026
23 Wednesday Sept. 2026

# Editorial /ಸಂಪಾದಕೀಯ

## ಭಕ್ತಿಯ ಹೆಸರಿನಲ್ಲಿ ಭಯದ ವ್ಯಾಪಾರ: ಕಳ್ಳ ಸ್ವಾಮೀಜಿಗಳ ಮೋಸದ ಜಾಲ

ಮುಸ್ಸಂಜೆ ಸಮಯ:
ಮದ್ಯ ವ್ಯಸನಿಗಳ ಚಟ ಬಿಡಿಸುವುದು ಕ್ಯಾನ್ಸರ್, ಹೃದಯ ಕಾಯಿಲೆ, ಮನೆಯಲ್ಲಿ ಅಶಾಂತಿ, ಗಂಡ ಹೆಂಡಿರ ಜಗಳ, ಮದುವೆ ಆಗಿಲ್ಲವಾ, ಕಂದಾಯದ ಕಚೇರಿಯಲ್ಲಿ ಕೆಲಸ ಆಗಿಲ್ಲವಾ, ಮಕ್ಕಳಿಗೆ ಮದುವೆ ಆಗಿಲ್ಲವಾ, ಆರೋಗ್ಯ ಸರಿ ಇಲ್ಲವಾ,

ಇಂದಿನ ಕಾಲದಲ್ಲಿ ಇಂತಹ ನಮ್ಮ ಕಷ್ಟಗಳೇ ಕೆಲವು ಕಳ್ಳ ಸ್ವಾಮೀಜಿಗಳಿಗೆ ದುಡ್ಡು ಮಾಡುವ ಅಂಗಡಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ಟಿವಿಯಲ್ಲಿ, ಯೂಟ್ಯೂಬ್ ನಲ್ಲಿ, ಗೋಡೆಗಳ ಮೇಲೆ "100% ಗ್ಯಾರಂಟಿ – 24 ಗಂಟೆಯಲ್ಲಿ ನಿಮ್ಮ ಸಮಸ್ಯೆ ಪರಿಹಾರ" ಎಂದು ಜಾಹೀರಾತು ಹಾಕುವ ಸ್ವಾಮೀಜಿಗಳ ಸಂಖ್ಯೆ ಹೆಚ್ಚಾಗಿದೆ. ಅವರು ಸ್ವಾಮೀಜಿಗಳಲ್ಲ, ಅವರು ಮನಸ್ಸಿನ ದೌರ್ಬಲ್ಯದ ವ್ಯಾಪಾರಿಗಳು.

**ಅವರ ಮೋಸದ ವಿಧಾನ ಹೇಗಿರುತ್ತದೆ?**

1. ಮೊದಲು ಭಯ ಹುಟ್ಟಿಸುತ್ತಾರೆ: ನಿಮ್ಮ ಮನೆಗೆ ದೋಷ ಇದೆ, ನಿಮ್ಮ ಮೇಲೆ ಯಾರೋ ಮಾಟ ಮಾಡಿಸಿದ್ದಾರೆ, ನಿಮ್ಮ ಜಾತಕದಲ್ಲಿ ರಾಹು ಕೇತು ಇದೆ ಎಂದು ಹೇಳಿ ಮೊದಲು ಮನಸ್ಸಿನಲ್ಲಿ ಭಯ ಬಿತ್ತುತ್ತಾರೆ.

2. ನಂತರ ಪರಿಹಾರದ ಹೆಸರಲ್ಲಿ ಸುಲಿಗೆ: ಆ ಭಯ ಹೋಗಬೇಕಾದರೆ ವಿಶೇಷ ಪೂಜೆ ಮಾಡಬೇಕು, ನರಬಲಿ ಹೋಮ ಮಾಡಬೇಕು, ಕುರಿ ಕೋಳಿ ಕೊಡಬೇಕು, ತಾಯಿತ ತಗೋಬೇಕು ಎಂದು ಹೇಳುತ್ತಾರೆ. ಒಂದು ಪೂಜೆಗೆ 5 ಸಾವಿರ, ಇನ್ನೊಂದಕ್ಕೆ 20 ಸಾವಿರ ಎಂದು ಹಂತ ಹಂತವಾಗಿ ದುಡ್ಡು ಕೀಳುತ್ತಾರೆ. ಕಷ್ಟದಲ್ಲಿ ಇರುವ ಜನರು ಮನೆ, ಹೊಲ ಅಡವಿಟ್ಟು ಅವರಿಗೆ ದುಡ್ಡು ಕೊಡುತ್ತಾರೆ.



3. ವಿಜ್ಞಾನವನ್ನೇ ಮರೆಸುತ್ತಾರೆ: ಅನಾರೋಗ್ಯಕ್ಕೆ ಆಸ್ಪತ್ರೆಗೆ ಹೋಗಬೇಕಾದ ಜನರನ್ನು "ಇದು ವೈದ್ಯರಿಂದ ವಾಸಿ ಆಗಲ್ಲ, ಇದು ದೇವ್ವದ ಕಾಟ" ಎಂದು ಹೇಳಿ ಆಸ್ಪತ್ರೆಯಿಂದ ದೂರ ಮಾಡುತ್ತಾರೆ. ಇದರಿಂದ ಎಷ್ಟೋ ಜೀವಗಳೇ ಹೋಗಿವೆ.

ನಾವು ಯಾಕೆ ಮೋಸ ಹೋಗುತ್ತೇವೆ?

ನಮಗೆ ತಕ್ಷಣ ಪರಿಹಾರ ಬೇಕು ಎಂಬ ಆಸೆಯಿಂದ. ದೇವರ ಮೇಲೆ ಇರುವ ನಂಬಿಕೆಯನ್ನು ಇವರು ದುರುಪಯೋಗ ಮಾಡಿಕೊಳ್ಳುತ್ತಾರೆ. ನಿಜವಾದ ದೇವರು ಎಂದಿಗೂ ದುಡ್ಡು ಕೇಳುವುದಿಲ್ಲ.

**ಕರ್ನಾಟಕದಲ್ಲಿ ಕಾನೂನು ಇದೆ:**

ಕರ್ನಾಟಕ ಮಾಟ–ಮಂತ್ರ ಮತ್ತು ವಾಮಾಚಾರ ಪ್ರತಿಬಂಧಕ ಕಾಯ್ದೆ 2017 ರ ಪ್ರಕಾರ ಮಾಟ–ಮಂತ್ರದ ಹೆಸರಲ್ಲಿ ಜನರನ್ನು ಹೆದರಿಸಿ ದುಡ್ಡು ವಸೂಲಿ ಮಾಡುವುದು ಶಿಕ್ಷಾರ್ಹ ಅಪರಾಧ. ಅಂತಹವರ ವಿರುದ್ಧ 112 ಕ್ಕೆ ಕರೆ ಮಾಡಿ ಅಥವಾ ಹತ್ತಿರದ ಪೊಲೀಸ್ ಠಾಣೆಯಲ್ಲಿ ದೂರು ನೀಡಬಹುದು.

**ನಿಜವಾದ ಸ್ವಾಮೀಜಿ ಯಾರು?**

ನಿಜವಾದ ಗುರುಗಳು ಎಂದಿಗೂ ನಿಮ್ಮ ಜೇಬಿನ ಕಡೆ ನೋಡುವುದಿಲ್ಲ. ಅವರು ದುಡ್ಡು ಕೇಳುವುದಿಲ್ಲ, ಭಯ ಹುಟ್ಟಿಸುವುದಿಲ್ಲ, ನಿಮ್ಮನ್ನು ಸ್ವಾವಲಂಬಿಯಾಗಲು ಹೇಳುತ್ತಾರೆ. ಬಸವಣ್ಣ, ಬುದ್ಧ, ಕನಕದಾಸರು ಇದನ್ನೇ ಹೇಳಿದ್ದು. ಭಕ್ತಿ ಇರಲಿ, ಆದರೆ ಮೂಢನಂಬಿಕೆ ಬೇಡ. ಕಷ್ಟ ಬಂದಾಗ ದೇವರನ್ನು ನಂಬಿ, ಆದರೆ ಮೋಸಗಾರ ರನ್ನು ನಂಬಬೇಡಿ. ದುಡ್ಡು ಕೊಟ್ಟು ಪೂಜೆ ಮಾಡಿಸಿದರೆ ಸಮಸ್ಯೆ ಪರಿಹಾರ ಆಗುವುದಿಲ್ಲ, ಸಮಸ್ಯೆ ಇನ್ನೂ ಜಾಸ್ತಿ ಆಗುತ್ತದೆ.

**–ನಿಮ್ಮ ವಿವೇಕವೇ ನಿಮ್ಮ ದೊಡ್ಡ ರಕ್ಷಣೆ.**



–ಪ್ರದೀಪ್ ಗೌಡ

## ಹಾಸನ ನವವಿವಾಹಿತೆ ಕಣ್ಮರೆ ಕೇಸ್‌ಗೆ ಬಿಗ್ ಟ್ವಿಸ್ಟ್: ಪ್ರಿಯಾಂಕಾ ಬಗ್ಗೆ ಸತ್ಯ ಮುಚ್ಚಿಟ್ಟು ಮದುವೆ ಮಾಡಿದ್ರು ಎಂದು ಪತಿ ಸಂಬಂಧಿಕರ ಆರೋಪ



**ಮುಸ್ಸಂಜೆ ಸಮಯ,**
ಹಾಸನ,: ಜಿಲ್ಲೆಯಲ್ಲಿ ಭಾರಿ ಕುತೂಹಲ ಹಾಗೂ ಅನುಮಾನಕ್ಕೆ ಕಾರಣವಾಗಿದ್ದ ನವವಿವಾಹಿತೆ ಪ್ರಿಯಾಂಕಾ ನಿಗೂಢ ಕಣ್ಮರೆ ಪ್ರಕರಣಕ್ಕೆ ಇದೀಗ ರೋಚಕ ಹಾಗೂ ಸ್ಫೋಟಕ ತಿರುವು ಸಿಕ್ಕಿದೆ. ಪತಿ ರಾಜಶೇಖರ ಅವರ ಕುಟುಂಬಸ್ಥರು ಹಾಗೂ ಸಂಬಂಧಿಕರು ಕಣ್ಮರೆಯಾಗಿರುವ ಯುವತಿ ಪ್ರಿಯಾಂಕಾ ಹಾಗೂ ಆಕೆಯ ಪೋಷಕರ ವಿರುದ್ಧವೇ ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ಯುವತಿ ಕೇವಲ ಕಣ್ಮರೆಯಾಗಿಲ್ಲ, ಆಕೆಗೆ ಈಗಾಗಲೇ ಮೊದಲೇ ಒಂದು ಮದುವೆಯಾಗಿತ್ತು ಎಂಬ ಕಹಿ ಸತ್ಯವನ್ನು ಮುಚ್ಚಿಟ್ಟು ಮದುವೆ ಮಾಡಿಕೊಡಲಾಗಿದೆ ಎಂದು ಆಕೆಯ ಪತಿಯ ದೊಡ್ಡಪ್ಪ ಮಂಜುನಾಥ್ ಹಾಗೂ ಸಂಬಂಧಿಕರು ಆರೋಪಿಸಿದ್ದಾರೆ.

ಪ್ರಿಯಾಂಕಾಗೆ ಮೊದಲೇ ಒಂದು ಮದುವೆಯಾಗಿತ್ತು. ರಾಜಶೇಖರ ಜೊತೆ ಮದುವೆಯಾಗುತ್ತಿದ್ದ ದಿನವೇ ಆಕೆಯ ಹಳೆಯ ಗಂಡ ಪೊಲೀಸರ ಜೊತೆ ಕಲ್ಯಾಣ ಮಂಟಪಕ್ಕೇ ಬಂದಿದ್ದ ಎಂದು ಪತಿಯ ಸಂಬಂಧಿಕರು ಬಹಿರಂಗಪಡಿಸಿದ್ದಾರೆ. ಮಗಳು ಹಳೆಯ ಗಂಡನ ಜೊತೆ ಓಡಿ ಹೋಗುತ್ತಾಳೆ ಎಂಬ ಆತುರದಲ್ಲಿ ಆಕೆಯ ಪೋಷಕರು ವಿಚಾರ ಮುಚ್ಚಿಟ್ಟು ಮದುವೆಗೆ ಮುಂದಾಗಿದ್ದರು. ಮಗಳು ಮದುವೆಗೆ ಒಪ್ಪದಿದ್ದಾಗ ತಂದೆ–ತಾಯಿ ವಿಷದ ಬಾಟಲಿ ಹಿಡಿದು ಬೆದರಿಸಿ, ಒತ್ತಾಯಪೂರ್ವಕವಾಗಿ ರಾಜಶೇಖರ ಜೊತೆ ಮದುವೆಗೆ ಒಪ್ಪಿಸಿದ್ದರು.



ಯುವತಿಯ ಹಳೆಯ ಮದುವೆ ಹಾಗೂ ಪ್ರೇಮ ಪ್ರಕರಣದ ಸತ್ಯ ಗೊತ್ತಿದ್ದ ಕಾರಣಕ್ಕೆ ಆಕೆಗೆ ಮೊಬೈಲ್ ಫೋನ್ ಕೂಡ ನೀಡುತ್ತಿರಲಿಲ್ಲ. ಮದುವೆಗೂ ಮುಂಚೆಯೇ ಮಗಳನ್ನು ತಂದು ರಾಜಶೇಖರ ಮನೆಯಲ್ಲಿ ಬಿಟ್ಟು ಹೋಗಿದ್ದರು. ಮದುವೆಯಾದ ಬಳಿಕ ಮಗಳು ಎಲ್ಲಿ ಗಂಡನನ್ನು ಬಿಟ್ಟು ಓಡಿಬಂದು ಬಿಡುತ್ತಾಳೋ ಎಂಬ ಭಯದಿಂದ ಆಕೆಯ ಪೋಷಕರು ಪದೇ ಪದೇ ರಾಜಿ ಸಂಧಾನ ಮಾಡುತ್ತಿದ್ದರು ಎಂದು ರಾಜಶೇಖರ ದೊಡ್ಡಪ್ಪ ಮಂಜುನಾಥ್ ಆರೋಪಿಸಿದ್ದಾರೆ.

“ಹೆಣ್ಣಿನ ಮನೆಯವರು ಮಾಡಿದ ದೊಡ್ಡ ತಪ್ಪಿಗೆ ಹಾಗೂ ಸತ್ಯ ಮುಚ್ಚಿಟ್ಟಿದ್ದಕ್ಕೆ ಇಂದು ನಮ್ಮ ಹುಡುಗ ರಾಜಶೇಖರ ಜೀವನ ಹಾಳಾಗಿದೆ. ಆಕೆಗೆ ಚೆನ್ನಾಗಿ ಈಜು ಕೂಡ ಬರುತ್ತಿತ್ತು. ಹೀಗಾಗಿ ಆಕೆ ನಿಜವಾಗಿಯೂ ನೀರಿನಲ್ಲಿ ಬಿದ್ದು ಸತ್ತಿದ್ದಾಳೋ ಅಥವಾ ಜೀವಂತವಾಗಿದ್ದು ಎಲ್ಲಾದರೂ ಓಡಿಹೋಗಿದ್ದಾಳೋ ಎಂಬ ದೊಡ್ಡ ಅನುಮಾನ ನಮಗಿದೆ” ಎಂದು ಪತಿಯ ಸಂಬಂಧಿಕರು ಸಂಶಯ ವ್ಯಕ್ತಪಡಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆಯನ್ನು ತೀವ್ರಗೊಳಿಸಿದ್ದು, ಕಣ್ಮರೆಯಾಗಿರುವ ನವವಿವಾಹಿತೆಯ ಹಿನ್ನೆಲೆ ಹಾಗೂ ಈ ಸ್ಫೋಟಕ ಆರೋಪಗಳ ಕುರಿತು ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

## ಬೆಂಗಳೂರು 2 ಫ್ಲೈಓವರ್‌ಗಳಿಗೆ ಗುಜರಾತ್ ಮಾದರಿ ಟೋಲ್; ಎಲೆಕ್ಟ್ರಾನಿಕ್ ಸಿಟಿ, ಪೀಣ್ಯ ಮೇಲ್ಸೇತುವೆಗೆ ಜಾರಿ!

**ಮುಸ್ಸಂಜೆ ಸಮಯ,**
ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಫ್ಲೈಓವರ್ ಮತ್ತು ನೆಲಮಂಗಲ ಹೆದ್ದಾರಿಯಲ್ಲಿ ಟ್ರಾಫಿಕ್ ಜಾಮ್ ತಪ್ಪಿಸಲು 'ಮಲ್ಟಿಲೇನ್ ಫ್ರೀ ಫ್ಲೋ ಟೋಲಿಂಗ್' (ಎಂಎಲ್‌ಎಫ್‌ಎಫ್) ವ್ಯವಸ್ಥೆ ಜಾರಿಗೆ ಬರಲಿದೆ. ಇದರಿಂದ ವಾಹನಗಳು ಟೋಲ್ ಗೇಟ್‌ನಲ್ಲಿ ನಿಲ್ಲದೆ ಸರಾಗವಾಗಿ ಸಂಚರಿಸಬಹುದು.

ಬೆಂಗಳೂರು ಟೋಲ್ ಗೇಟ್‌ನಲ್ಲಿ ಫಾಸ್ಟ್‌ಟ್ಯಾಗ್ ರೀಡಿಂಗ್‌ಗಾಗಿ ವಾಹನಗಳು ಸಾಲುಗಟ್ಟಿ ನಿಲ್ಲದೇ ಸರಾಗವಾಗಿ ಸಂಚರಿಸುವ ನೂತನ ವ್ಯವಸ್ಥೆಯಾದ 'ಮಲ್ಟಿಲೇನ್ ಫ್ರೀ ಫ್ಲೋ ಟೋಲಿಂಗ್' (ಎಂಎಲ್‌ಎಫ್‌ಎಫ್) ಸಿಸ್ಟಮ್ ಹೊಂದಿರುವ ರಾಷ್ಟ್ರೀಯ ಹೆದ್ದಾರಿಗಳಾಗಿ 'ಎಲೆಕ್ಟ್ರಾನಿಕ್ ಸಿಟಿ ಫ್ಲೈಓವರ್' ಮತ್ತು ಬೆಂಗಳೂರು–ನೆಲಮಂಗಲ ಹೆದ್ದಾರಿ ಮೇಲ್ದರ್ಜೆಗೆ ಏರಲಿವೆ. ಇದು ರಾಜ್ಯದಲ್ಲೇ ಮೊದಲು.

ಭಾರಿ ಗಾತ್ರದ ಟ್ರಕ್‌ಗಳು, ಕಾರುಗಳು ಸೇರಿದಂತೆ ಈ ಎರಡು ಹೆದ್ದಾರಿಗಳಲ್ಲಿ ನಿತ್ಯ ಲಕ್ಷಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿವೆ. ಫಾಸ್ಟ್ ಟ್ಯಾಗ್ ರೀಡಿಂಗ್‌ಗಾಗಿ ಟೋಲ್‌ಗೇಟ್ ಬಳಿ ವಾಹನಗಳು ಸಾಲುಗಟ್ಟಿ ನಿಂತು ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ಟ್ರಾಫಿಕ್ ಜಾಮ್ ತಪ್ಪಿಸಿ ವಾಹನಗಳ ಸುಗಮ ಸಂಚಾರಕ್ಕಾಗಿ ಎಂಎಲ್‌ಎಫ್‌ಎಫ್ ಸಿಸ್ಟಮ್ ಜಾರಿಗೆ ತರಲಾಗುತ್ತಿದೆ. ಇದಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂಬರುವ ದಿನಗಳಲ್ಲಿ ಎಂಎಲ್‌ಎಫ್‌ಎಫ್ ಜಾರಿಯಾಗಲಿದೆ ಎಂದು ಎನ್‌ಎಚ್‌ಎಐ ಪ್ರಾದೇಶಿಕ ಅಧಿಕಾರಿ ವಿಲಾಸ್ ಪಿ.ಬ್ರಹ್ಮಂಕರ್ 'ಮಾಧ್ಯಮಗಳಿಗೆ' ತಿಳಿಸಿದರು.

**ಹೇಗೆ ಕಾರ್ಯ ನಿರ್ವಹಿಸುತ್ತದೆ?:**

ಹೆದ್ದಾರಿ, ಫ್ಲೈಓವರ್‌ನ ಪ್ರಮುಖ ಸ್ಥಳಗಳಲ್ಲಿ 'ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನಿಷನ್' ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ. ಈ ಕ್ಯಾಮೆರಾಗಳು ಚಲಿಸುವ ವಾಹನಗಳ ನಂಬರ್ ಪ್ಲೇಟ್ ಮತ್ತು ಅದರ ಫಾಸ್ಟ್‌ಟ್ಯಾಗ್ ರೀಡ್ ಮಾಡುತ್ತವೆ. ಬಳಿಕ ಸಂಚರಿಸಿದ ದೂರಕ್ಕೆ ಅನುಗುಣವಾಗಿ ಸ್ವಯಂಚಾಲಿತವಾಗಿ ಫಾಸ್ಟ್‌ಟ್ಯಾಗ್ ಮೂಲಕ ಶುಲ್ಕ ಕಡಿತವಾಗುತ್ತದೆ. ಬ್ಯಾಲೆನ್ಸ್ ಇಲ್ಲದ ಫಾಸ್ಟ್‌ಟ್ಯಾಗ್ ವಾಹನಗಳಿಗೆ ನೋಟಿಸ್ ಜಾರಿ ಮಾಡಲಾಗುತ್ತದೆ. 72 ತಾಸುಗಳ ಒಳಗೆ ವಾಹನ ಮಾಲೀಕರು ಶುಲ್ಕ ಪಾವತಿಸಬೇಕು. ವಿಳಂಬ ಮಾಡಿದರೆ ದುಪ್ಪಟ್ಟು ಶುಲ್ಕ ವಸೂಲಿ ಮಾಡಲಾಗುತ್ತದೆ.

ಹೊಸೂರು ರಸ್ತೆಯಲ್ಲಿ 10 ಕಿ.ಮೀ ಉದ್ದದ ಎಲೆಕ್ಟ್ರಾನಿಕ್ ಸಿಟಿ ಫ್ಲೈಓವರ್ ಟೋಲ್ ಮತ್ತು 14 ಕಿ.ಮೀ ಉದ್ದದ ಅತ್ತಿಬೆಲೆ ಟೋಲ್ ಬೂತ್‌ಗಳನ್ನು ತೆರವುಗೊಳಿಸಿ ಎಂಎಫ್‌ಎಫ್‌ಎಲ್ ವ್ಯವಸ್ಥೆ ಜಾರಿ ಮಾಡಲಾ



ಗುತ್ತದೆ. ಅದೇ ರೀತಿ ಗೊರಗುಂಟೆಪಾಳ್ಯದಿಂದ ಆರಂಭವಾಗುವ ಬೆಂಗಳೂರು–ನೆಲಮಂಗಲ (ಫ್ಲೈಓವರ್ ಸಹಿತ) ಹೆದ್ದಾರಿಯನ್ನು ಎಂಎಲ್‌ಎಫ್‌ಎಫ್ ವ್ಯವಸ್ಥೆಗೆ ಒಳಪಡಿಸಲಾಗುತದೆ. ಗುಜರಾತ್ ಸೇರಿದಂತೆ ದೇಶದ ಕೆಲವು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಾತ್ರ ಈ ವ್ಯವಸ್ಥೆ ಜಾರಿಯಲ್ಲಿದೆ.

**ಎಲ್ಲಿ ಜಾರಿ?:**

ಹೊಸೂರು ರಸ್ತೆ: 10 ಕಿ.ಮೀ ಉದ್ದದ ಎಲೆಕ್ಟ್ರಾನಿಕ್ ಸಿಟಿ ಫ್ಲೈಓವರ್ ಟೋಲ್ ಮತ್ತು 14 ಕಿ.ಮೀ ಉದ್ದದ ಅತ್ತಿಬೆಲೆ ಟೋಲ್ ಬೂತ್‌ಗಳನ್ನು ತೆರವುಗೊಳಿಸಿ ಈ ಎಂಎಲ್‌ಎಫ್‌ಎಫ್ ವ್ಯವಸ್ಥೆ ಜಾರಿ ಮಾಡಲಾಗುತ್ತದೆ.

ಬೆಂಗಳೂರು–ನೆಲಮಂಗಲ ಹೆದ್ದಾರಿ: ಗೊರಗುಂಟೆಪಾಳ್ಯದಿಂದ ಆರಂಭವಾಗುವ ಬೆಂಗಳೂರು–ನೆಲಮಂಗಲ (ಫ್ಲೈಓವರ್ ಸಹಿತ) ಹೆದ್ದಾರಿಯನ್ನು ಈ ವ್ಯವಸ್ಥೆಗೆ ಒಳಪಡಿಸಲಾಗುತ್ತದೆ.

**ಟೋಲ್ ಇರಲಿದೆ:**

ಎಲೆಕ್ಟ್ರಾನಿಕ್ ಸಿಟಿ ಫ್ಲೈಓವರ್‌ನ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣ ಮತ್ತು ನಿರ್ವಹಣೆಯ 20 ವರ್ಷಗಳ ಒಪ್ಪಂದದ ಅವಧಿ ಮುಗಿದಿದೆ. ಆದರೆ, ಟೋಲ್ ಸಂಗ್ರಹ ನಿಲ್ಲಿಸಬೇಕು ಎಂಬ ಯಾವುದೇ ನಿಯಮಗಳು ಇಲ್ಲ. ಫ್ಲೈಓವರ್ ನಿರ್ವಹಣೆಗಾಗಿ ಟೋಲ್ ಸಂಗ್ರಹ ಅನಿವಾರ್ಯ. ಈ ಹಣ ಎನ್‌ಎಚ್‌ಎಐಗೆ ಹೋಗುತ್ತದೆ ಎಂದು ವಿಲಾಸ್ ಪಿ. ಬ್ರಹ್ಮಂಕರ್ ತಿಳಿಸಿದರು.

**ಟೋಲ್ ಹೆಚ್ಚಳ , ದ್ವಿಚಕ್ರ ವಾಹನಗಳಿಗೆ ಉಚಿತ**

ಒಪ್ಪಂದ ಅವಧಿ ಮುಗಿದಿರುವ ಹಿನ್ನೆಲೆಯಲ್ಲಿ ಖಾಸಗಿ ನಿರ್ವಹಣೆಯಿಂದ ಎನ್‌ಎಚ್‌ಎಐ ವ್ಯಾಪ್ತಿಗೆ ಬಂದಿರುವ ಎಲೆಕ್ಟ್ರಾನಿಕ್ ಸಿಟಿ ಫ್ಲೈಓವರ್‌ನಲ್ಲಿ ಮುಂದಿನ ದಿನಗಳಲ್ಲಿ ಟೋಲ್ ಶುಲ್ಕವನ್ನು ಪರಿಷ್ಕರಿಸಿ ಹೆಚ್ಚಳ ಮಾಡಲಾಗುತ್ತದೆ. ಅಲ್ಲದೇ, ದ್ವಿಚಕ್ರ ವಾಹನಗಳಿಗೆ ಇರುವ ಟೋಲ್ ಶುಲ್ಕವನ್ನು ರದ್ದುಗೊಳಿಸಲಾಗುತ್ತದೆ. ಹಾಲಿ 'ಎನ್‌ಎಚ್‌ಎಐ ಫೀ ರೂಲ್ಸ್–1997'ಕ್ಕೆ ಒಳಪಟ್ಟಿರುವ ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ತಮಿಳುನಾಡು ಗಡಿವರೆಗಿನ ಈ ರಾಷ್ಟ್ರೀಯ ಹೆದ್ದಾರಿಯನ್ನು 'ಎನ್‌ಎಚ್‌ಎಐ ಫೀ ರೂಲ್ಸ್ 2008'ಕ್ಕೆ ಒಳಪಡಿಸಲಾಗುತ್ತದೆ. ಹೀಗಾಗಿ, ಶುಲ್ಕ ಪರಿಷ್ಕರಣೆಯಾಗಲಿದೆ ಎಂದು ಎನ್‌ಎಚ್‌ಎಐ ಪ್ರಾದೇಶಿಕ ಅಧಿಕಾರಿ ವಿಲಾಸ್ ತಿಳಿಸಿದರು.

ಎರಡು ಪ್ರಮುಖ ಹೆದ್ದಾರಿಗಳು ನಗರ ವ್ಯಾಪ್ತಿಯಲ್ಲೇ ಇವೆ. ಟೋಲ್ ಗೇಟ್‌ಗಳ ಬಳಿ ಭಾರಿ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ವಾಹನಗಳ ಸುಗಮ ಸಂಚಾರಕ್ಕಾಗಿ 'ಎಂಎಲ್‌ಎಫ್‌ಎಫ್ ಸಿಸ್ಟಮ್' ಅನ್ನು ಆದಷ್ಟು ಬೇಗ ಅನುಷ್ಠಾನಗೊಳಿಸುವ ಉದ್ದೇಶವಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಪ್ರಾದೇಶಿಕ ಅಧಿಕಾರಿ ವಿಲಾಸ್ ಪಿ. ಬ್ರಹ್ಮಂಕರ್ ತಿಳಿಸಿದರು.

## ದುಬೈನ ಶಾರ್ಜಾದಲ್ಲಿ ಕನ್ನಡಿಗನ ಬರ್ಬರ ಹತ್ಯೆ: ಎದೆಗೆ ಚೂರಿ ಇರಿದು 9 ತುಂಡುಗಳನ್ನಾಗಿ ಕತ್ತರಿಸಿ ಕಾರಿನಲ್ಲಿ ತುಂಬಿದ ದುಷ್ಕರ್ಮಿಗಳು

**ಮುಸ್ಸಂಜೆ ಸಮಯ,**
ಶಾರ್ಜಾ: ದುಬೈನ ಶಾರ್ಜಾದಲ್ಲಿ ಉಡುಪಿ ಮೂಲದ ಕನ್ನಡಿಗನನ್ನು ದುಷ್ಕರ್ಮಿಗಳು ಬರ್ಬರವಾಗಿ ಹತ್ಯೆ ಮಾಡಿದ್ದು, ದೇಹವನ್ನು 9 ತುಂಡುಗಳನ್ನಾಗಿ ಕತ್ತರಿಸಿ ಕಾರಿನಲ್ಲಿ ತುಂಬಿರುವ ಘಟನೆ ನಡೆದಿದೆ.

ಜುಲೈ ತಿಂಗಳಿನಲ್ಲಿಯೇ ನಡೆದಿರುವ ಈ ಕೊಲೆ ತಡವಾಗಿ ಬೆಳಕಿಗೆ ಬಂದಿದೆ.

ಪ್ರಕಾಶ್ ಕುಂದರ್ ಬರ್ಬರವಾಗಿ ಹತ್ಯೆಯಾಗಿರುವ ದುರ್ದೈವಿ. ದುಷ್ಕರ್ಮಿಗಳು ಪ್ರಕಾಶ್ ಕುಂದರ್ ಅವರ ಎದೆಗೆ ಚೂರಿ ಇರಿದು ಕೊಲೆಮಾಡಿ, ಶವವನ್ನು 9 ತುಂಡುಗಳನ್ನಾಗಿ ಕತ್ತರಿಸಿ ಅವರದ್ದೇ ಕಾರಿನ ಡಿಕ್ಕಿಯಲ್ಲಿ ತುಂಬಿದ್ದರು ಎಂದು ತಿಳಿದುಬಂದಿದೆ.

ಪ್ರಕಾಶ್ ಕುಂದರ್ ಶಾರ್ಜಾ ಏರ್ ಪೋರ್ಟ್‌ ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಪತ್ನಿ ಹಾಗೂ ಪುತ್ರನೊಂದಿಗೆ ಶಾರ್ಜಾದಲ್ಲಿಯೇ ಹಲವು ವರ್ಷಗಳಿಂದ ನೆಲೆಸಿದ್ದರು. ಕೊಲೆಯ ಬಳಿಕ ಮೃತನ ಪತ್ನಿ ಟೀನಾ ಹಾಗೂ ಅಪ್ರಾಪ್ತ ವಯಸ್ಸಿನ ಪುತ್ರ ನಾಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಪತ್ನಿಯೇ ಕೊಲೆ ಮಾಡಿಸಿದ್ದಾರೆಯೇ? ಅಥವಾ ಬೇರೆಯವರ ಸಹಾಯದಿಂದ ಕೃತ್ಯ ಎಸಗಲಾಗಿದೆಯೇ? ಪತ್ನಿ ಹಾಗೂ ಮಗ ನಾಪತ್ತೆಯಾಗಲು ಕಾರಣವಾದರೂ ಏನು? ಇಡೀ ಘಟನೆ ಹಿಂದಿನ ಕೈವಾಡವಾದರೂ ಏನು? ಎಂಬ ಬಗ್ಗೆ ಶಾಅರ್ಜಾ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪ್ರಕಾಶ್ ಕುಂದರ್ ಸಾವಿನ ಬಳಿಕ ಪತ್ನಿ ಮತ್ತು ಪುತ್ರ ಭಾರತಕ್ಕೆ ಬಂದಿರುವ ಶಂಕೆ ಕೂಡ ವ್ಯಕ್ತವಾಗಿದೆ. ಈ ಸಂಬಂಧ ಶಾರ್ಜಾ ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ.

ಪ್ರಕಾಶ್ ಕುಂದರ್ ನ ಕುಟುಂಬದವರು ಉಡುಪಿಯಲ್ಲಿದ್ದಾರೆ. ಜು.20 ರಂದು ಸಹೋದರ ಪ್ರಕಾಶ್ ಕುಂದರ್ ನನ್ನು ಸಂಪರ್ಕಿಸಲು ಪ್ರಶಾಂತ್ ಕುಂದರ್ ಯತ್ನಿಸಿದ್ದರು. ಮೆಸೇಜ್ ಹಾಕಿದಾಗ ಯಾವಾಗಲೂ ಪ್ರಕಾಶ್ ವಾಯ್ಸ್ ಮೆಸೇಜ್ ಮೂಲಕ ಪ್ರತಿಕ್ರಿಯೆ ನೀಡುತ್ತಿದ್ದರು. ಆದರೆ ಈ ಬಾರಿ ಟೆಕ್ಸ್ಟ್ ಮೆಸೇಜ್ ಮೂಲಕ ಉತ್ತರ ನೀಡಿದ್ದರು. ಹಲವು ಬಾರಿ ಕರೆ ಮಾಡುವಂತೆ ಸಂದೇಶ ಕಳುಹಿಸಿದರೂ ಪ್ರಕಾಶ್ ಕಡೆಯಿಂದ ಕೇವಲ ಟೆಕ್ಸ್ಟ್ ಮೆಸೇಜ್ ಮಾತ್ರ



ಬರುತ್ತಿತ್ತು. ಇದಕ್ಕೆ ಸಹೋದರ ಪ್ರಶಾಂತ್ ಈ ಬಾರಿ ನಿನಗೆ ಕರೆ ಮಾಡಿ ಮಾತನಾಡಲೂ ಸಮಯವಿಲ್ಲವೇ? ಎಂದು ಬೈದು ಮೆಸೇಜ್ ಕಳುಹಿಸಿದ್ದರಂತೆ ಈ ಮೆಸೇಜ್ ನೋಡಿದ ಬಳಿಕವೂ ಪ್ರಕಾಶ್ ಕುಂದರ್ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಎರಡು ದಿನ ಕಾದರೂ ಯಾವುದೇ ಮೆಸೇಜ್, ಕರೆ ಬಾರದಿದ್ದಾಗ ಪ್ರಶಾಂತ್ ಅವರು ಕರೆ ಮಾಡಿದ್ದಾರೆ. ಮೆಸೇಜ್ ಕಳುಹಿಸಿದ್ದಾರೆ. ಕುಟುಂಬಸ್ಥರು ಕರೆ ಮಾಡುವಂತೆ ಒತ್ತಾಯಿಸಿದ ನಂತರ ಸಂಪರ್ಕ ಸಂಪೂರ್ಣ ಕಡಿತಗೊಂಡಿತ್ತು. ಇದರಿಂದ ಅನುಮಾನಗೊಂಡ ಸಹೋದರರು ಪ್ರಕಾಶ್ ಕೆಲಸ ಮಾಡುತ್ತಿದ್ದ ಕಂಪನಿಯ ಹೆಚ್ ಆರ್ ಅವರನ್ನು ಸಂಪರ್ಕಿಸಿದ್ದರು. ಆಗ ಅವರು ಭಾರತಕ್ಕೆ ಹೋಗಿರುವುದಾಗಿ ಕಂಪನಿಯವರು ತಿಳಿಸಿದ್ದರು. ಆದರೆ ಅವರು ಭಾರತಕ್ಕೆ ಮರಳಿಲ್ಲ ಎಂದು ಪ್ರಶಾಂತ್ ತಿಸಿದ್ದರು. ಪ್ರಕಾಶ್ ವಾಸವಿದ್ದ ಮನೆಯ ಬಳಿ ಇದ್ದ ಭಾರತದ ಪರಿಚಯಸ್ಥರಿಬ್ಬರಿಗೆ ಕರೆ ಮಾಡಿ ಪ್ರಕಾಶ್ ಮನೆಗೆ ಹೋಗಿ ನೋಡುವಂತೆ ತಿಳಿಸಿದ್ದರಂತೆ. ಆತ ಮನೆ ಬಳಿ ಹೋಗಿ ನೋಡಿದಾಗ ಮನೆಯಲ್ಲಿ ಯಾರೂ ಇರಲಿಲ್ಲ. ಈ ಬಗ್ಗೆ ಮಾಹಿತಿ ಗೊತ್ತಾಗುತ್ತಿದ್ದಂತೆ ಆತಂಕಕ್ಕೊಳಗಾದ ಪ್ರಶಾಂತ್, ಪ್ರಕಾಶ್ ಅವರ ಕಂಪನಿಗೆ ಕರೆ ಮಾಡಿ ದೂರು ದಾಖಲಿಸಿದ್ದರಂತೆ. ಅಲ್ಲದೇ ಶಾರ್ಜಾ ಪೊಲೀಸರಿಗೂ ಈ ಬಗ್ಗೆ ಮಾಹಿತಿ ನೀಡಿ ನಾಪತ್ತೆ ದೂರು ದಾಖಲಿಸಿದ್ದರು. ಪ್ರಕಾಶ್ ಕುಂದರ್ ಭಾರತಕ್ಕೆ ಬಾರದೇ ಇರುವುದರಿಂದ ಶಾರ್ಜಾದಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಪೊಲೀಸರು ಹುಡುಕಾಟ ನಡೆಸಿದಾಗ ಪ್ರಕಾಶ್ ಅವರ ಕಾರಿನ ಡಿಕ್ಕಿಯಲ್ಲಿ ಮೃತದೇಹ ಪತ್ತೆಯಾಗಿತ್ತು.ದುಷ್ಕರ್ಮಿಗಳು ಮೃತದೇಹವನ್ನು ಒಂಭತ್ತು ತುಂಡುಗಳನ್ನಾಗಿ ಮಾಡಿ ಕತ್ತರಿಸಿ ಕಾರಿನಲ್ಲಿ ಇಟ್ಟಿದ್ದರು. ಪ್ರಕಾಶ್ ಕುಂದರ್ ಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ.

ಪ್ರಕಾಶ್ ಸಾವಿನ ಬಳಿಕ ಅವರ ಪತ್ನಿ ಟೀನಾ ಹಾಗೂ ಅಪ್ರಾಪ್ತ ಮಗ ಎಲ್ಲಿಗೆ ಹೋಗಿದ್ದಾರೆ? ನಾಪತ್ತೆಯಾಗಲು ಕಾರಣವೇನು? ಎಂಬ ಬಗ್ಗೆಯೂ ತಿಳಿದುಬಂದಿಲ್ಲ. ಶಾರ್ಜಾ ಪೊಲೀಸರು ಕೊಲೆ ಆರೋಪಿಗಳ ಪತ್ತೆಗೆ ಹುಡುಕಾಟ ನಡೆಸಿದ್ದಾರೆ. ಇತ್ತ ಉಡುಪಿಯಲ್ಲಿ ಅವರ ಸಹೋದರರು ಹಾಗೂ ಕುಟುಂಬದವರು ಪ್ರಕಾಶ್ ಮೃತದೇಹಕ್ಕಾಗಿ ಕಾಯುತ್ತಿದ್ದಾರೆ.

## ರೇಣುಕಾಸ್ವಾಮಿ ಕೊಲೆ ಪ್ರಕರಣ: 'ತೊಟ್ಟು ವಿಷ ಕೊಡಿಸಿ ಅಂತಿದ್ದಾರೆ ಪವಿತ್ರಾ ಗೌಡ' ಕೋರ್ಟ್‌ನಲ್ಲಿ ವಕೀಲರ ವಾದ

**ಮುಸ್ಸಂಜೆ ಸಮಯ,**
ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಕೇಸ್‌ಗೆ ಸಂಬಂಧಿಸಿದಂತೆ ಬೆಂಗಳೂರಿನ ಸೆಷನ್ಸ್ ಕೋರ್ಟ್‌ನಲ್ಲಿ ಜಾಮೀನು ಅರ್ಜಿ ವಿಚಾರಣೆ ನಡೆಯುತ್ತಿದ್ದು, ಈ ವೇಳೆ ಆರೋಪಿ ಪವಿತ್ರಾ ಗೌಡ ಪರ ವಕೀಲರು ಜೈಲಿನಲ್ಲಿ ತಮ್ಮ ಕಕ್ಷಿದಾರರು ಅನುಭವಿಸುತ್ತಿರುವ ಕಷ್ಟವನ್ನು ವಿವರಸಿದ್ದಾರೆ.

"ಹಿಂಸೆ ತಡೆಯಲು ಆಗುತ್ತಿಲ್ಲ, ನನಗೆ ಒಂದಿಷ್ಟು ವಿಷ ಕೊಟ್ಟು ಬಿಡಿ " ಎಂದು ಪವಿತ್ರಾ ಗೌಡ ಕೇಳುತ್ತಿದ್ದಾರೆ ಎಂದು ವಕೀಲರು ನ್ಯಾಯಾಧೀಶರ ಮುಂದೆ ಪ್ರಸ್ತಾಪ ಮಾಡಿದ್ದಾರೆ.

ಕೊಲೆ ಕೇಸ್ ವಿಚಾರಣೆಯು ತಡವಾಗುತ್ತಿದ್ದು ಜಾಮೀನು ನೀಡಬೇಕು ಎಂದು ಪವಿತ್ರಾ ಗೌಡ ಅರ್ಜಿ ಸಲ್ಲಿಕೆ ಮಾಡಿದ್ದರು. ಪವಿತ್ರಾಗೌಡ ಪರ ಹಿರಿಯ ವಕೀಲ ಬಾಲನ್ ವಾದ ಮಂಡಿಸಿದರೆ, ಮತ್ತೊಬ್ಬ ವಕೀಲ ನಾರಾಯಣಸ್ವಾಮಿ ಕೂಡ ಇದ್ದರು. ಪೊಲೀಸರ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಪ್ರಸನ್ನಕುಮಾರ್ ಹಾಜರಿದ್ದರು.

**ಪವಿತ್ರಾ ಗೌಡ ವಕೀಲರ ವಾದ ಏನು?**

ನಮ್ಮ ಕಕ್ಷಿದಾರರ ಮಹಿಳೆಯಾಗಿದ್ದು, ವಯಸ್ಸಾದ ತಾಯಿ ಹಾಗೂ ಶಾಲೆಗೆ ಹೋಗುತ್ತಿರುವ ಮಗಳನ್ನು ಆರೈಕೆ ಮಾಡಬೇಕಿದೆ.

ಪ್ರಕರಣದ ವಿಚಾರಣೆ



ವಿಳಂಬವಾಗುತ್ತಿದೆ.

ಆರೋಪಿಯಾದರೂ ಈಗಾಗಲೇ 1 ವರ್ಷಕ್ಕೂ ಹೆಚ್ಚು ಕಾಲ ಜೈಲಿನಲ್ಲಿ ಕಳೆದಿದ್ದಾರೆ.

ಬಹುತೇಕ ಸಾಕ್ಷಿಗಳ ವಿಚಾರಣೆ ಪೂರ್ಣಗೊಂಡಿದ್ದು, ಕೆಲವು ಸಾಕ್ಷಿಗಳು ಸರ್ಕಾರಿ ಸಾಕ್ಷಿಗಳು ಮಾತ್ರ ಬಾಕಿ ಇವೆ. ಜಾಮೀನು ನೀಡಿದರೆ ಸಾಕ್ಷ್ಯನಾಶದಲ್ಲಿ ಭಾಗಿಯಾಗಲ್ಲ, ತೊಂದರೆ ಕೊಡುವುದಿಲ್ಲ. ಸುಪ್ರೀಂ ಕೋರ್ಟ್‌ನ ಒಂದು ವರ್ಷದ ಜಾಮೀನು ನಿರ್ಬಂಧ ಪವಿತ್ರಾ ಗೌಡಗೆ ಅನ್ವಯವಾಗುವುದಿಲ್ಲ.

ಜೈಲಿನ ಅಧಿಕಾರಿಗಳು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದಾರೆ. ಹಿಂಸೆ ತಡೆಯಲು ಆಗುತ್ತಿಲ್ಲ, ಒಂದು ತೊಟ್ಟು ವಿಷ ಕೊಡಿಸಿ ಎಂದು ಪವಿತ್ರಾ ಗೌಡ ಹೇಳುತ್ತಿದ್ದಾರೆ.

**ಸರ್ಕಾರಿ ಅಭಿಯೋಜಕರ ವಾದ ಏನು?**

ಪ್ರಸನ್ನಕುಮಾರ್, " ಸುಪ್ರೀಂ ಕೋರ್ಟ್ ಒಂದು ವರ್ಷದ ಅವಧಿಯಲ್ಲಿ 60 ಸಾಕ್ಷಿಗಳ ವಿಚಾರಣೆ ಪೂರ್ಣಗೊಳಿ ಸಲು ಸೂಚಿಸಿದೆ. ಹೀಗಾಗಿ, ಸಾಕ್ಷಿಗಳ ವಿಚಾರಣೆ ಪೂರ್ಣಗೊಳ್ಳುವವರೆಗೆ ಜಾಮೀನು ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಈ ನಿರ್ಬಂಧವು ಪವಿತ್ರಾಗೌಡ ಸೇರಿದಂತೆ ರೇಣುಕಾಸ್ವಾಮಿ ಕೊಲೆ ಪ್ರಕರಣದ ಎಲ್ಲಾ ಆರೋಪಿಗಳಿಗೂ ಅನ್ವಯಿಸುತ್ತದೆ "ಎಂದರು.

## ಗೃಹಲಕ್ಷ್ಮಿ ಯೋಜನೆಗೆ ಪತಿ ಆಧಾರ್ ಕಾರ್ಡ್ ಕೂಡ ಕಡ್ಡಾಯ: ಹೊಸ ಮಾರ್ಗಸೂಚಿಯೊಂದಿಗೆ ಫಲಾನುಭವಿಗಳ ಮರು ಪರಿಶೀಲನೆ

ಮೊದಲನೇ ಪುಟದಿಂದ

ಗೃಹಲಕ್ಷ್ಮಿ ಅರ್ಹ ಫಲಾನುಭವಿ ಗಳಿಗೆ ಬಯೋಮೆಟ್ರಿಕ್ ಮರು ಪರಿಶೀಲನೆ

ರಾಜ್ಯ ಸರ್ಕಾರವು ಗೃಹಲಕ್ಷ್ಮಿ ಯೋಜನೆಯಡಿ ಅರ್ಹ ಫಲಾನುಭವಿಗಳ ಬಯೋಮೆಟ್ರಿಕ್ ದೃಢೀಕರಿಸುವ ಮೂಲಕ ಮರುಪರಿಶೀಲನೆ ನಡೆಸಲು ಪ್ರಮಾಣಿತ ಕಾರ್ಯಾಚರಣಾ ವಿಧಾನ ಜಾರಿಗೆ ತರಲಾಗುವುದು.

ಗೃಹಲಕ್ಷ್ಮಿ ಫಲಾನುಭವಿಗಳ ವಿವರಗಳನ್ನು ಪರಿಶೀಲಿಸಿ, ಅವರ ಪ್ರಸ್ತುತ ಸ್ಥಿತಿಯನ್ನು ದೃಢಿಕರಿಸುವ ಉದ್ದೇಶದಿಂದ ಫಲಾನುಭವಿಗಳ ಮರುಪರಿಶೀಲನಾ ಕಾರ್ಯವನ್ನು ನಿಯೋಜಿತ ಗಣತಿದಾರರು (Enumerators) ಹಾಗೂ ಗ್ಯಾರಂಟಿ ಸಮಿತಿ (GC) ಸದಸ್ಯರು ಕಡ್ಡಾಯವಾಗಿ ಮನೆ–ಮನೆಗೆ ಭೇಟಿ ನೀಡುವರು. ಮೊಬೈಲ್ ಅಪ್ಲಿಕೇಶನ್ ಜಿಪಿಎಸ್ ಗುರುತಿನೊಂದಿಗೆ ಛಾಯಾಚಿತ್ರದ ಸಾಕ್ಷ್ಯ ಆಧಾರ್ ಆಧಾರಿತ ಮುಖದ ದೃಢಿಕರಣ ಹಾಗೂ ಪರ್ಯಾಯ ಸಹಾಯಕ ವ್ಯವಸ್ಥೆಯಾಗಿ ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಇತರೆ ನಿಗದಿತ ಕೇಂದ್ರಗಳ ಸೇವೆಯನ್ನು ಬಳಸಲಾಗುವುದು.

ಗೃಹಲಕ್ಷ್ಮಿ ಯೋಜನೆಯ ಅರ್ಹ ಫಲಾನುಭವಿಗಳ ಮರುಪರಿಶೀಲನೆ ಕಾರ್ಯವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೈಗೊಂಡಿದ್ದು, ಕಾರ್ಯಾರಂಭವಾದ ದಿನಾಂಕದಿಂದ ಒಂದು ತಿಂಗಳೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ಹೇಳಲಾಗಿದೆ.

ಮರುಪರಿಶೀಲನೆ ಪ್ರಕ್ರಿಯೆಯ ತಾಂತ್ರಿಕ ಪಾಲುದಾರ ಸಂಸ್ಥೆಯಾಗಿ ಪ್ರಜಾಸೇವಾ ಇಲಾಖೆಯ ಅಧೀನದಲ್ಲಿರುವ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ(EDCS) ಕಾರ್ಯನಿರ್ವಹಿಸಲಿದೆ. ಈ ಪ್ರಕ್ರಿಯೆಯಲ್ಲಿ ಮನೆ–ಮನೆಗೆ ಭೇಟಿ ನೀಡುವುದು ಕಡ್ಡಾಯವಾಗಿದ್ದು, ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಹಾಗೂ ಇತರೆ ನಿಗದಿತ ಸೇವಾ ಕೇಂದ್ರಗಳು ಕೇವಲ ಸಹಾಯಕ ಅಥವಾ ಪರ್ಯಾಯ ವ್ಯವಸ್ಥೆಯಾಗಿ ಮಾತ್ರ ಬಳಸಲಾಗುತ್ತದೆ.

ಮರುಪರಿಶೀಲನೆ ಈಗಾಗಲೇ ಗುರುತಿಸಲ್ಪಟ್ಟಿರುವ ಅಸ್ತಿತ್ವದಲ್ಲಿರುವ ಫಲಾನುಭವಿಗಳಿಗೆ ಮಾತ್ರ ಸೀಮಿತವಾಗಿದ್ದು, ಹೊಸ ನೋಂದಣಿಯನ್ನು ಈ ಕಾರ್ಯಾಚರಣೆಯ ವ್ಯಾಪ್ತಿಗೆ ಒಳಪಡಿಸಲಾಗುವುದಿಲ್ಲ ಎಂದು ಹೇಳಲಾಗಿದೆ.

## ರಾಜ್ಯ ಸರ್ಕಾರದಿಂದ ಆಡಳಿತ ಯಂತ್ರಕ್ಕೆ ಮೇಜರ್ ಸರ್ಜರಿ: 10 IAS ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ

ಮೊದಲನೇ ಪುಟದಿಂದ

**ಜಿ.ಪಂ ಸಿಇಒಗಳ (CEO) ಅದಲು–ಬದಲು:**

**ಆನಂದ್ ಪ್ರಕಾಶ್ ಮೀನಾ (IAS - 2019):** ಕೊಡಗು ಜಿಲ್ಲಾ ಪಂಚಾಯಿತಿ ಸಿಇಒ ಆಗಿದ್ದ ಇವರನ್ನು ವಿಜಯಪುರ ಜಿಲ್ಲಾ ಪಂಚಾಯಿತಿ ಸಿಇಒ ಆಗಿ ವರ್ಗಾವಣೆ ಮಾಡಲಾಗಿದೆ.

**ರಿಷಿ ಆನಂದ್ (IAS - 2020):** ವಿಜಯಪುರ ಜಿ.ಪಂ ಸಿಇಒ ಹುದ್ದೆಯಿಂದ ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಿಇಒ ಆಗಿ ವರ್ಗಾಯಿಸಲಾಗಿದೆ..

**ಹೇಮಂತ್ ಎನ್. (IAS - 2020):** ಶಿವಮೊಗ್ಗ ಜಿ.ಪಂ ಸಿಇಒ ಆಗಿದ್ದ ಇವರನ್ನು ಹುಬ್ಬಳ್ಳಿಯ ಹೆಸ್ಕಾಂ (HESCOM) ವ್ಯವಸ್ಥಾಪಕ ನಿರ್ದೇಶಕರನ್ನಾಗಿ (MD) ನೇಮಿಸಲಾಗಿದೆ.

**ದಿನೇಶ್ ಕುಮಾರ್ ಮೀನಾ (IAS - 2023):** ಕೊಳ್ಳೇಗಾಲ ಉಪವಿಭಾಗದ ಸಹಾಯಕ ಆಯುಕ್ತರಾಗಿದ್ದ (AC) ಇವರನ್ನು ಕೊಡಗು ಜಿಲ್ಲಾ ಪಂಚಾಯಿತಿ ಸಿಇಒ ಆಗಿ ವರ್ಗಾಯಿಸಲಾಗಿದೆ.

(ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದ ಹಿನ್ನೆಲೆಯಲ್ಲಿ, ಇವರ ವರ್ಗಾವಣೆಯು ಭಾರತೀಯ ಚುನಾವಣಾ ಆಯೋಗದ ಇದು ಇಲಖ ಅಂತಿಮ ಅನುಮೋದನೆಗೆ ಒಳಪಟ್ಟಿರುತ್ತದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

## ಪ್ಲೀಸ್. ಪ್ಲೀಸ್.. ಕ್ಷಮಿಸಿಬಿಡಿ: ದೇವಸ್ಥಾನದಲ್ಲಿ ಮಹಿಳಾ ಪಿಎಸ್‌ಐ ಮೇಲೆ ಕೈಮಾಡಿದ್ದ ಶಾಸಕ ಸುರೇಶ್ ಗೌಡ ಪುತ್ರಿ ಐಶ್ವರ್ಯ ಗೌಡ ಕ್ಷಮೆಯಾಚನೆ!

**ಮುಸ್ಸಂಜೆ ಸಮಯ,**
ಮಂಡ್ಯ: ಜಿಲ್ಲೆಯ ಪಾಂಡವಪುರ ತಾಲೂಕಿನ ಪ್ರಸಿದ್ಧ ಆರತಿ ಉಕ್ಕಡದ ಮಾರಮ್ಮ ದೇವಸ್ಥಾನದಲ್ಲಿ ಕರ್ತವ್ಯದಲ್ಲಿದ್ದ ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸವಿತಾ ಬಿ. ಪಾಟೀಲ್ ಅವರ ಮೇಲೆ ಹಲ್ಲೆ ನಡೆಸಿ, ಗಲಾಟೆ ಸೃಷ್ಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತುಮಕೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಶಾಸಕ ಬಿ.ಸುರೇಶ್‌ಗೌಡ ಹಾಗೂ ಅವರ ಮಗಳು ಐಶ್ವರ್ಯ ಗೌಡ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ್ದಾರೆ.

ಭೀಮನ ಅಮಾವಾಸ್ಯೆಯ ವಿಶೇಷ ಪೂಜೆಯ ಹಿನ್ನೆಲೆಯಲ್ಲಿ ಆರತಿ ಉಕ್ಕಡದ ಮಾರಮ್ಮ ದೇವಸ್ಥಾನದಲ್ಲಿ ಭಕ್ತಾದಿಗಳ ಅಪಾರ ದಟ್ಟಣೆಯಿತ್ತು.ಈ ವೇಳೆ ಕಾನೂನು ಸುವ್ಯವಸ್ಥೆ ಮತ್ತು ಭದ್ರತೆಯ ಉಸ್ತುವಾರಿ ವಹಿಸಿದ್ದ ಮಹಿಳಾ ಪಿಎಸ್‌ಐ ಸವಿತಾ ಅವರು ಪ್ರತಿಯೊಬ್ಬರಿಗೂ ಸರದಿಯಲ್ಲಿ ಬರುವಂತೆ ಸೂಚಿಸುತ್ತಿದ್ದರು.ಆದರೆ, ಶಾಸಕರ ಮಗಳು ಐಶ್ವರ್ಯ ಅವರು ಸಾಲಿನಲ್ಲಿ ನಿಲ್ಲದೆ ನೇರವಾಗಿ ಗರ್ಭಗುಡಿಗೆ ಪ್ರವೇಶಿಸಲು ಯತ್ನಿಸಿದಾಗ ಪಿಎಸ್‌ಐ ತಡೆದಿದ್ದಾರೆ.ಇದರಿಂದ ಕೆರಳಿದ ಐಶ್ವರ್ಯ, 'ನಾನು ಶಾಸಕರ ಮಗಳು' ಎಂದು ದರ್ಪ ತೋರಿಸಿ, ಅಧಿಕಾರಿ ಜೊತೆ ತೀವ್ರ ಮಾತಿನ ಚಕಮಕಿ ನಡೆಸಿ, ಅವರ ಮೇಲೆ ಕೈಮಾಡಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಘಟನೆ ನಡೆದ ಹಲವು ದಿನಗಳ ನಂತರ, ದೇವಸ್ಥಾನದ ಸಿಸಿಟಿವಿ ದೃಶ್ಯಾವಳಿಗಳು ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದವು.ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ, ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು,



ಕ್ಯಾತನಹಳ್ಳಿ ಪೊಲೀಸ್ ಠಾಣೆಯಲ್ಲಿ ಐಶ್ವರ್ಯ ವಿರುದ್ಧ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಾಗೂ ಹಲ್ಲೆ ನಡೆಸಿದ ಆರೋಪದಡಿ (BNS ಕಾಯ್ದೆಯಡಿ) ಎಫ್‌ಐಆರ್ ದಾಖಲಿಸಿಕೊಂಡರು.

ಪ್ರಕರಣ ವಿಕೋಪಕ್ಕೆ ತಿರುಗುತ್ತಿದ್ದಂತೆ ಮಾಧ್ಯಮಗಳ ಮುಂದೆ ಬಂದ ಶಾಸಕ ಬಿ. ಸುರೇಶ್‌ಗೌಡ, 'ಸಾರ್ವಜನಿಕ ಜೀವನದಲ್ಲಿರುವ ನಾವುಗಳು ತಾಳ್ಮೆ ವಹಿಸುವುದು ಅತ್ಯಗತ್ಯ. ನನ್ನ ಮಗಳು ಆತುರದಲ್ಲಿ ಕೋಪದ ಕೈಗೆ ಬುದ್ಧಿ ಕೊಟ್ಟು ಸಾರ್ವಜನಿಕ ಸ್ಥಳದಲ್ಲಿ ಈ ರೀತಿ ನಡೆದುಕೊಂಡಿರುವುದು ತಪ್ಪಾಗಿದೆ. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಆಕೆಯ ಪರವಾಗಿ ಹಾಗೂ ಕುಟುಂಬದ ಪರವಾಗಿ ನಾನು ಪೊಲೀಸ್ ಇಲಾಖೆ ಹಾಗೂ ರಾಜ್ಯದ ಜನತೆಯಲ್ಲಿ ಕ್ಷಮೆ ಕೋರುತ್ತೇನೆ,' ಎಂದು ತಿಳಿಸಿದರು.

ಅಲ್ಲದೆ, ಶಾಸಕರ ಮಗಳು ಐಶ್ವರ್ಯ ಕೂಡ ತಮ್ಮ ನಡವಳಿಕೆಗೆ ವಿಷಾದ ವ್ಯಕ್ತಪಡಿಸಿದ್ದು, 'ಸ್ಥಳದಲ್ಲಿ ನಡೆದ ಗೊಂದಲದಲ್ಲಿ ತಾಳ್ಮೆ ಕಳೆದುಕೊಂಡಿದ್ದೆ. ನನ್ನ ನಡೆಯಿಂದ ಪೊಲೀಸ್ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಿ,' ಎಂದು ಕೋರಿದ್ದಾರೆ.

ದೇವಸ್ಥಾನಗಳಂತಹ ಧಾರ್ಮಿಕ ಕೇಂದ್ರಗಳಲ್ಲಿ ಜನಪ್ರತಿನಿಧಿಗಳ ಹಾಗೂ ಅವರ ಕುಟುಂಬದವರ 'ವಿಐಪಿ ಕಲ್ಚರ್' ದರ್ಪಕ್ಕೆ ಈ ಘಟನೆ ಜ್ವಲಂತ ನಿದರ್ಶನವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೇವರ ಮುಂದೆ ಪ್ರತಿಯೊಬ್ಬರೂ ಸಮಾನರು, ಧಾರ್ಮಿಕ ಸ್ಥಳಗಳಲ್ಲಿ ಇಂತಹ ವಿಐಪಿ ಸಂಸ್ಕೃತಿಗೆ ತಡೆ ನೀಡಬೇಕು ಎಂಬ ಒತ್ತಾಯ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಕೇಳಿಬರುತ್ತಿದೆ.

